ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

07 ಮೇ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 57 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಹೈದರಾಬಾದ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡ 235 ರನ್ ಗಳಿಸಿದೆ.

ಎಐ ಎಂಬ ದತ್ತಾಂಶದ ಜಾಲ ಮತ್ತು ಅನುಭವದ ದೀಪ » 2

ಬಿಳಿ ಚೌಡಯ್ಯ ವಿರುದ್ಧ ಅಪಪ್ರಚಾರ ನಿಲ್ಲಿಸಿ » 3



ಪ್ರಾಜೆಕ್ಟ್ ಫ್ರೀಡಂ ತಾತ್ಕಾಲಿಕ ಸ್ಥಗಿತಗೊಳಿಸಿದ ಟ್ರಂಪ್ » 4

ದಸರಾ ವೀರ ಅರ್ಜುನ ಸ್ಮಾರಕ ಲೋಕಾರ್ಪಣೆ

ಆನೆಯ ಸಾಧನೆ ಕೊಂಡಾಡಿದ ಸಚಿವ ಈಶ್ವರ್ ಖಂಡ್ರೆ । ಕಾಡಾನೆ ಸಂಘರ್ಷ ತಡೆಗೆ ಕ್ರಮದ ಭರವಸೆ

• ಪ್ರಜೋದಯ ವರದಿ

ಸಕಲೇಶಪುರ: ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಅಂತಿಮ ಹಂತದ ವರೆಗೂ ಹೋರಾಡಿ ಹುತಾತ್ಮನಾಗಿದ್ದ ದಸರಾ ಗಜಪಡೆಯ ವೀರ ಅರ್ಜುನನ ಸ್ಮಾರಕವನ್ನು ತಾಲ್ಲೂಕಿನ ಯಸಳೂರು ವಲಯದ ದಬ್ಬಳ್ಳಿಕಟ್ಟೆ ಮೀಸಲು ಅರಣ್ಯ ಪ್ರದೇಶದಲ್ಲಿ ಬುಧವಾರ ಲೋಕಾರ್ಪಣೆ ಮಾಡಲಾಯಿತು.

ಸ್ಮಾರಕ ಉದ್ಘಾಟಿಸಿ ಮಾತನಾಡಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಅರ್ಜುನ ಕೇವಲ ಆನೆಯಲ್ಲ, ಕರ್ನಾಟಕದ ಏಳು ಕೋಟಿ ಜನರ ಮನಗೆದ್ದ ಗಜರಾಜ. ಮೈಸೂರು ದಸರಾ ಮಹೋತ್ಸವದಲ್ಲಿ ಎಂಟು ಬಾರಿ ಚಿನ್ನದ ಅಂಬಾರಿಯನ್ನು ಹೊತ್ತು ಗಾಂಭೀರ್ಯದಿಂದ ಹೆಜ್ಜೆ ಹಾಕಿದ ಅವನ ಸೇವೆ ಅಮೋಘವಾಗಿದೆ. ಅವನ ಅಗಲಿಕೆ ರಾಜ್ಯಕ್ಕೆ ತುಂಬಲಾರದ ನಷ್ಟವುಂಟಾಗಿದೆ ಎಂದರು.

2023ರ ಡಿಸೆಂಬರ್ 4ರಂದು ಬೆಳಗಾವಿ ಅಧಿವೇಶನದ ವೇಳೆ

ವನ್ಯಜೀವಿ ಸಂಖ್ಯೆಯಲ್ಲಿ ಹೆಚ್ಚಳ

1972ರಲ್ಲಿ ಬಂಡೀಪುರದಲ್ಲಿ ಕೇವಲ 110 ಇದ್ದ ಆನೆಗಳ ಸಂಖ್ಯೆ ಈಗ 1,100ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ 6,395 ಆನೆಗಳಿವೆ. ಹೀಗಾಗಿ 1970ರ ದಶಕದಲ್ಲಿ ಕುಟುಂಬ ಯೋಜನೆ ಜಾರಿಗೆ ತಂದು ನಾವಿಬ್ಬರು-ನಮಗಿಬ್ಬರು ಎಂಬ ಸಂದೇಶವನ್ನು ಜನರಿಗೆ ತಲುಪಿಸಿದ ರೀತಿಯಲ್ಲೇ ಆಯ್ದ ಪ್ರದೇಶದಲ್ಲಿ ಆಯ್ದ ವನ್ಯಜೀವಿಗಳಿಗೆ ಸಂತಾನಶಕ್ತಿ ನಿಯಂತ್ರಣ ಮಾಡುವ ಅಗತ್ಯವಿದೆ. ಈ ಬಗ್ಗೆ ಚರ್ಚೆ ಆಗಬೇಕೆಂಬ ಹೇಳಿಕೆ ನೀಡಿದ್ದೇನೆ. ಈ ಬಗ್ಗೆ ಜನಾಭಿಪ್ರಾಯ ಮೂಡಬೇಕೆಂದು ಸಚಿವ ಈಶ್ವರ್ ಖಂಡ್ರೆ ಹೇಳಿದರು.

ಕಾಡಿನ ಹೊರಗೆ ಇರುವ ಆನೆಗಳನ್ನು ಒಂದು ಕಡೆ ಕಲೆ ಹಾಕಲು ಆನೆಧಾಮ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಅದಕ್ಕೆ 2 ಸಾವಿರ ಹೆಕ್ಟೇರ್ ಜಮೀನು ಗುರುತಿಸಲಾಗಿದೆ. ಶೀಘ್ರವೇ ಈ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದರು.

ಕಣ್ಣೀರಿಟ್ಟ ಮಾವುತ ವಿನು

ಸ್ಮಾರಕ ಲೋಕಾರ್ಪಣೆಗೊಂಡ ನಂತರ ಅರ್ಜುನನ ಮಾವುತ ವಿನು ಅರ್ಜುನನ ಸ್ಮಾರಕಕ್ಕೆ ಪೂಜೆ ಸಲ್ಲಿಸಿ ಕಣ್ಣೀರಿಟ್ಟರು. ಈ ವೇಳೆ ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ನಾನು ಅರ್ಜುನನ್ನು ಸಾಕಿದ್ದೇನೆ. ನನ್ನ ಹೆಂಡತಿ ಮತ್ತು ಮಕ್ಕಳ ಜೊತೆ ಅವನನ್ನು ಬೆಳೆಸಿದ್ದೇನೆ. ಸ್ಮಾರಕ ಲೋಕಾರ್ಪಣೆ ಕಾರ್ಯಕ್ರಮದ ಬಗ್ಗೆ ನನಗೆ ಮಾಹಿತಿ ನೀಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಶಿಲ್ಪಿ ಧನಂಜಯ ಅವರು ಸ್ಮಾರಕ ನಿರ್ಮಿಸಿದ್ದಾರೆ. 10 ಅಡಿ ಎತ್ತರ, 13 ಅಡಿ ಅಗಲದ ಅರ್ಜುನನ ಸ್ಮಾರಕ ಆಕರ್ಷಕವಾಗಿ ಮೂಡಿಬಂದಿದೆ.

ಅರ್ಜುನ ಹುತಾತ್ಮನಾದ ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಬಂದು ಸಮಾಧಿಗೆ ಪೂಜೆ ಸಲ್ಲಿಸಿ ಸ್ಮಾರಕ ನಿರ್ಮಾಣದ ಘೋಷಣೆ ಮಾಡಿದ್ದೆವು. ಅದರಂತೆ ಸ್ಮಾರಕ ನಿರ್ಮಾಣ ಮಾಡಲಾಗಿದೆ. ಮೈಸೂರಿನ ಬಳ್ಳೆ ಶಿಬಿರದಲ್ಲೂ ಸ್ಮಾರಕ ನಿರ್ಮಿಸಲಾಗಿದೆ. ಈ ಪ್ರದೇಶ ಮಾನವ-ಪ್ರಾಣಿ ಸಂಘರ್ಷಕ್ಕೆ ಒಳ ಪಟ್ಟಿದ್ದು, ಆನೆಗಳು ಅರಣ್ಯದ ಹೊರ ಭಾಗದಲ್ಲೇ ಸಂಚರಿಸುತ್ತಿವೆ. ಅದನ್ನು ಗಮನದಲ್ಲಿಟ್ಟುಕೊಂಡು ಆನೆ ಧಾಮ ನಿರ್ಮಾಣದ ಯೋಜನೆ ಕೈಗೊಳ್ಳಲಾಗಿದೆ. ಮಾನವ ಜೀವ ಅತ್ಯಮೂಲ್ಯವಾಗಿರುವುದರಿಂದ ಸಂರಕ್ಷಣೆ ಜೊತೆಗೆ ವನ್ಯಜೀವಿಗಳ ರಕ್ಷಣೆಯನ್ನೂ ಮಾಡ ಲಾಗುತ್ತಿದೆ ಎಂದರು.

ಅರ್ಜುನ ಹೆಸರಲ್ಲಿ ಪ್ರಶಸ್ತಿ

ಅರ್ಜುನ ಆನೆಯ ಸ್ಮರಣಾರ್ಥವಾಗಿ ಪ್ರತಿಷ್ಠಿತ ಪ್ರಶಸ್ತಿ ಘೋಷಿಸಲಾಗಿದ್ದು, ಭೀಮ ಆನೆಯ ಕಾರ್ಯಾಚರಣೆಯಲ್ಲಿ ಪುಂಡ ಆನೆಗಳನ್ನು ಹಿಡಿಯುವಲ್ಲಿ ಯಶಸ್ವಿಯಾದ ಮಾವುತ ನಂಜುಂಡಸ್ವಾಮಿ ಹಾಗು ಕಾವಾಡಿಗ ಗುಂಡೆಗೆ ಪ್ರಶಸ್ತಿ ನೀಡಲಾಗಿದೆ. ಈ ಪ್ರಶಸ್ತಿಯನ್ನು ಮುಂದು ವರಿಸಲಾಗುತ್ತದೆ. ಮುಂಚೂಣಿ ಸಿಬ್ಬಂದಿಗಳಾದ ಮಾವುತರು ಮತ್ತು ಕಾವಾಡಿಗರ ಸಾಹಸವನ್ನು ಗುರುತಿಸಿ

» ನಾಲ್ಕನೇ ಪುಟದಲ್ಲಿ

ಹೈಕಮಾಂಡ್ ಮಾತು ಕೇಳುವೆ: ಸಿಎಂ

ರಾಹುಲ್ ಗಾಂಧಿ ನವದೆಹಲಿಗೆ ಕರೆದಿಲ್ಲ, ಕರೆದರೆ ಹೋಗುವೆ

• ಪ್ರಜೋದಯ ವರದಿ

ಮೈಸೂರು: ನಾನು ಹೈಕಮಾಂಡ್ ಮಾತನ್ನು ಮಾತ್ರವೇ ಕೇಳುವುದು. ಅವರು ಹೇಳಿದರೆ ಐದು ವರ್ಷವೂ ಮುಖ್ಯಮಂತ್ರಿ ಆಗಿರುತ್ತೇನೆಂದು ಸಿದ್ದರಾಮಯ್ಯ ಅವರು ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐದು ವರ್ಷವೂ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುತ್ತದೆ. ನೀವೇ ಇರಿ ಎಂದರೆ ಇರುತ್ತೇನೆ. ಎಲ್ಲಾ ತೀರ್ಮಾನವನ್ನೂ ಮಾಡುವುದು ಹೈಕಮಾಂಡ್. ಬೇರೆ ಯಾರೇ ಏನೇ ಹೇಳಿದರೂ ಅವರ ವೈಯಕ್ತಿಕ ಅಭಿಪ್ರಾಯವಷ್ಟೇ ಎಂದರು.

ರಾಹುಲ್ ಗಾಂಧಿ ನನ್ನನ್ನು ಈವರೆಗೂ ನವದೆಹಲಿಗೆ ಕರೆದಿಲ್ಲ, ಅವರಾಗಿಯೇ ಕರೆದರೆ ಹೋಗುತ್ತೇನೆ. ಸಚಿವ ಸಂಪುಟ ಪುನರ್‌ರಚನೆಯೋ, ವಿಸ್ತರಣೆಯೋ ಎಂಬುದನ್ನು ಅವರು ಸಮಯ ಕೊಟ್ಟ ಮೇಲೆ ಚರ್ಚಿಸಿ ತೀರ್ಮಾನಿಸುತ್ತೇನೆ. ಯಾವಾಗ ಕರೆಯುತ್ತಾರೆಯೋ ಗೊತ್ತಿಲ್ಲವೆಂದು ಹೇಳಿದರು.

ನಮ್ಮ ಸರ್ಕಾರ ಹಾಗು ನಮ್ಮ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ಇಲ್ಲದಿದ್ದರೆ ಆಗ ಮೂರು ಉಪ ಚುನಾವಣೆ ಹಾಗು

ಈಗ ಎರಡು ಚುನಾವಣೆಗಳಲ್ಲಿ ನಾವು ಗೆಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಶೀಘ್ರದಲ್ಲೇ ಮಾಡುತ್ತೇವೆ. ವಿರೋಧ ಪಕ್ಷದವರು ಚುನಾವಣೆಯಲ್ಲಿ ತಂತ್ರಗಾರಿಕೆಯನ್ನೇನೂ ಮಾಡುವುದಿಲ್ಲ, ಅವರು ಕುತಂತ್ರಿಗಳು, ಕುತಂತ್ರ ಮಾಡಿದರೆಂದು ಪ್ರತಿಕ್ರಿಯಿಸಿದರು.

ಬಿಜೆಪಿಯಿಂದ ಕ್ರಿಮಿನಲ್ ಸಂಚು

ಶೃಂಗೇರಿ ಚುನಾವಣಾ ಫಲಿತಾಂಶದ ಬಗ್ಗೆ ಪ್ರತಿಕ್ರಿಯಿಸಿ, ಮತಎಣಿಕೆ ವಿಚಾರದಲ್ಲಿ ಬಿಜೆಪಿ ಕ್ರಿಮಿನಲ್ ಸಂಚು ನಡೆಸಿದೆ. ರಾಜೇಗೌಡರಿಗೆ ಬಿದ್ದಿದ್ದ 255 ಅರ್ಹವಾಗಿದ್ದ ಮತಗಳನ್ನು ಅನರ್ಹ ಮಾಡಲಾಗಿದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರವಿತ್ತು. ಬಿಜೆಪಿಯವರು ಮತ್ತು ಸಿಬ್ಬಂದಿ ಮೂಲಕ ಮತಪತ್ರಗಳನ್ನು ತಿದ್ದಲಾಗಿದ್ದು, ಇದು ಕ್ರಿಮಿನಲ್ ಸಂಚು. ಆದ್ದರಿಂದ ಶೃಂಗೇರಿ ಫಲಿತಾಂಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದರು.

ಮಮತಾ ಬ್ಯಾನರ್ಜಿಗೆ ಬಿಜೆಪಿ ಹಿಂಸೆ : ಕೃಷ್ಣಬೈರೇಗೌಡ

• ಪ್ರಜೋದಯ ವರದಿ

ಹಾಸನ: ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರಿಗೆ ಕೊಡಬಾರದ ಹಿಂಸೆ ಕೊಟ್ಟು, ಕೈ ಕಾಲು ಕಟ್ಟಿ ಬಿಜೆಪಿಯವರು ಅಧಿಕಾರಕ್ಕೆ ಬಂದಿದ್ದಾರೆ ಹೊರತು ನ್ಯಾಯ ಮಾರ್ಗದಿಂದ ಅಲ್ಲವೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಬಿಜೆಪಿ ನ್ಯಾಯ, ಧರ್ಮಯುತ ಮಾರ್ಗದಲ್ಲಿ ಅಧಿಕಾರಕ್ಕೆ ಬಂದಿಲ್ಲ. ಇಡಿ, ಸಿಬಿಐ, ಐಟಿ, ಚುನಾವಣಾ ಆಯೋಗಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ನಾವು ಜನರ ತೀರ್ಮಾನವನ್ನು ಒಪ್ಪಲೇಬೇಕು. ಮತದಾರರ ತೀರ್ಪನ್ನು ಗೌರವಿಸಬೇಕಾಗುತ್ತದೆಂದರು.

ಕೇರಳದಲ್ಲಿ ನಿರೀಕ್ಷೆಗೂ ಮೀರಿ ಕಾಂಗ್ರೆಸ್‌ಗೆ ಫಲಿತಾಂಶ ಬಂದಿರುವುದು ಸ್ವಲ್ಪಮಟ್ಟಿಗೆ ಸಮಾಧಾನ ತಂದಿದೆ. ಎಲ್‌ಡಿಎಫ್ ಹಾಗು ಯುಡಿಎಫ್ ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು. ಅಲ್ಲಿನ ಜನರು ನಮಗೆ ಬೆಂಬಲಿಸಿರುವುದು ಖುಷಿಯ ವಿಚಾರವೆಂದರು.

ತಮಿಳುನಾಡಿನಲ್ಲಿ ಕಡಿಮೆ ಅಂತರದಲ್ಲಾದರೂ ಡಿಎಂಕೆ ಮತ್ತೆ ಅಧಿಕಾರಕ್ಕೆ ಬರುತ್ತದೆಂಬ ನಿರೀಕ್ಷೆ ಹುಸಿಯಾಗಿದೆ. ಈ ಬಾರಿ ಅಲ್ಲಿನ ಯುವ ಸಮುದಾಯ ಬದಲಾವಣೆ ಬಯಸಿದೆ. ರಾಜಕೀಯ ವಿಶ್ಲೇಷಣೆಗಿಂತ ಬದಲಾವಣೆಯನ್ನು ಅಲ್ಲಿನ ಜನರು ಬಯಸಿದ್ದಾರೆ. ಯುವಕರು ಹೊಸ ಅಧ್ಯಾಯ ಆರಂಭ ಮಾಡಿದ್ದಾರೆ. ಜನರ ಅಭಿಪ್ರಾಯವನ್ನು ಸಮಚಿತ್ತದಿಂದ ಸ್ವೀಕರಿಸುತ್ತೇವೆಂದರು.

ಶೃಂಗೇರಿಯಲ್ಲಿ ಷಡ್ಯಂತ್ರ

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಕ್ಷೇತ್ರದ ಮರು ಎಣಿಕೆಯಲ್ಲಿ ದೊಡ್ಡ ಷಡ್ಯಂತ್ರ ನಡೆದಿದೆ. ಕಳೆದ ಬಾರಿ ಮತ ಎಣಿಕೆಯಾದ ನಂತರ ಕೆಲವು ಅಂಚೆ ಮತ ಪತ್ರಗಳನ್ನು ತಿದ್ದಿದ್ದಾರೆ. ಅಂಚೆ ಮತಗಳನ್ನು ಎಣಿಕೆ ಮಾಡಿ ಎಲ್ಲಾ ಪಕ್ಷದ ಏಜೆಂಟ್‌ರು ಅದಕ್ಕೆ ಸಹಿ ಹಾಕಿರುತ್ತಾರೆ. ಆದರೆ, ನಮ್ಮ ಅಭ್ಯರ್ಥಿ ರಾಜೇಗೌಡರಿಗೆ ದೊರೆತ ಮತಗಳ ಕೆಳಗೆ ಬೇರೆ ಇಂಕ್ ಉಪಯೋಗಿಸಿ, ಬೇರೆ ಅಭ್ಯರ್ಥಿಗಳಿಗೂ ಕೂಡ ಅಲ್ಲಿ ಟಿಕ್ ಮಾರ್ಕ್ ಮಾಡಿ, ಆ ಮತಗಳನ್ನು ಅನರ್ಹವಾಗುವಂತೆ ಮಾಡಿದ್ದಾರೆಂದು ಗಂಭೀರ ಆರೋಪ ಮಾಡಿದರು.

ಈ ಪ್ರಕರಣದಲ್ಲಿ ಷಡ್ಯಂತ್ರ ನಡೆದಿದೆ. ಸತ್ಯ ಹೊರಗೆ ಬರಬೇಕಾದರೆ ಪಾರದರ್ಶಕ ತನಿಖೆ ಆಗಬೇಕು. ಎಫ್‌ಎಸ್‌ಎಲ್‌ಗೆ ಕಳುಹಿಸಿ ಮೇಲೆ ಟಿಕ್ ಮಾಡಿರುವ ಇಂಕ್ ಹಾಗು ಕೆಳಗೆ ಟಿಕ್ ಮಾಡಿರುವ ಇಂಕ್ ಬೇರೆ ಬೇರೆಯೇ ಎಂಬುದನ್ನು ಪತ್ತೆ ಹಚ್ಚಬೇಕು. ಯಾರೋ ಕೆಲವು ಅಧಿಕಾರಿಗಳು ರಾಜೇಗೌಡರಿಗೆ ಬಂದಿದ್ದ ಮತಗಳನ್ನು ಒಂದೇ ಬಂಡಲ್‌ನಲ್ಲಿ ಇಟ್ಟಿದ್ದು, ಅದ ರಲ್ಲಿ ಬೇರೆ ಅಭ್ಯರ್ಥಿಗಳಿಗೆ ಟಿಕ್ ಒಂದೇ ಬಂಡಲ್‌ನಲ್ಲಿ ಆಗಿರುವುದು, ಬಂಡಲ್ ಎಣಿಕೆ ಆದಾಗ ಓಪನ್ ಆಗಿ ತ್ತು. ಇದೆಲ್ಲದರ ಬಗ್ಗೆ ತನಿಖೆ ಯಿಂದ ಸತ್ಯ ಹೊರಬರಬೇಕಾಗುತ್ತದೆಂದರು.

ಶಾಲೆಗಳಿರುವುದು ಮಕ್ಕಳಿಗೆ, ಶಿಕ್ಷಕರು-ಬಿಸಿಯೂಟ ಸಿಬ್ಬಂದಿಗಲ್ಲ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ 708 ಸರ್ಕಾರಿ ಶಾಲೆಯಲ್ಲಿ 10ಕ್ಕೂ ಕಡಿಮೆ ವಿದ್ಯಾರ್ಥಿಗಳಿದ್ದಾರೆ. ನಾವು ಶಾಲೆಗಳನ್ನು ನಡೆಸುವುದು ಮಕ್ಕಳ ಕಲಿಕೆ ಗಾಗಿಯೇ ಅಥವಾ ಶಿಕ್ಷಕರು, ಅಕ್ಷರ ದಾಸೋಹದ ಸಿಬ್ಬಂದಿ ಅನುಕೂಲಕ್ಕಾಗಿಯೇ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪ್ರಶ್ನಿಸಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಒಂದು ಶಾಲೆ ಎಂದರೆ ಕನಿಷ್ಠ 100 ವಿದ್ಯಾರ್ಥಿಗಳಿರಬೇಕು. ಆಗ ವಿದ್ಯಾರ್ಥಿ ಗಳಿಗೂ ಕಲಿಕೆಗೆ ಆಸಕ್ತಿ ಮೂಡುತ್ತದೆ. ಹಾಗೆಯೇ ಶಿಕ್ಷಕರಿಗೂ ಉತ್ಸಾಹವಿರುತ್ತದೆ. ಒಂದು ಶಾಲೆಯಲ್ಲಿ ನಾಲ್ಕೈದು ವಿದ್ಯಾರ್ಥಿ ಗಳಿದ್ದರೆ ಏನು ಕಲಿಸಲು ಸಾಧ್ಯ. ಯಾವ ರೀತಿ ಶಿಕ್ಷಣ ದೊರೆಯುತ್ತದೆ. ಈ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ವಾಸ್ತವ ಸ್ಥಿತಿ ತಿಳಿಸಬೇಕೆಂದು ಕೇಳಿದರು.

ಪ್ರತಿಕ್ರಿಯಿಸಿದ ಬಿಇಒಗಳು, ಕೆಲ ಶಾಲೆಗಳಲ್ಲಿ ಅಕ್ಷರ ದಾಸೋಹದ ಸಿಬ್ಬಂದಿ ಶಾಲೆ ಮುಚ್ಚಿದರೆ ತಮ್ಮ ಕೆಲಸ ಹೋಗುತ್ತದೆ ಎಂದು ತಮ್ಮ ಮಕ್ಕಳನ್ನು ಇಲ್ಲವೇ ಅಕ್ಕಪಕ್ಕದ ಮನೆಗಳ ಮಕ್ಕಳನ್ನು ಶಾಲೆಗೆ ಸೇರಿಸುತ್ತಿದ್ದಾರೆ. ಕೆಲ ಶಿಕ್ಷಕರು ಕೂಡ ಶಾಲೆ ಮುಚ್ಚಿದರೆ ವರ್ಗಾವಣೆಯಾಗುತ್ತದೆ ಎಂಬ ಕಾರಣಕ್ಕೆ ಶೂನ್ಯ ದಾಖಲಾತಿ ಯಾಗದಂತೆ ನೋಡಿಕೊಳ್ಳುತ್ತಿದ್ದಾರೆಂದು ನೈಜಸ್ಥಿತಿ ವಿವರಿಸಿದರು.

ಈ ವಿಚಾರ ತಿಳಿದ ಸಚಿವರು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ನಾವು ಶಾಲೆ ನಡೆಸುವುದು ಮಕ್ಕಳ ಕಲಿಕೆಗಾಗಿಯೇ ಅಥವಾ ಬಿಸಿಯೂಟದ ಸಿಬ್ಬಂದಿ, ಶಿಕ್ಷಕರಿಗೆ ಉದ್ಯೋಗ

» ನಾಲ್ಕನೇ ಪುಟದಲ್ಲಿ

- ಜಿಲ್ಲೆಯ 708 ಸರ್ಕಾರಿ ಶಾಲೆಯಲ್ಲಿ 10ಕ್ಕೂ ಕಡಿಮೆ ವಿದ್ಯಾರ್ಥಿಗಳು
- ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಸಮಾಧಾನ

ಭರವಸೆ ನೀಡಿದರೆ ಹೆಚ್ಚಿನ ಕೆಪಿಎಸ್ ಶಾಲೆ

ಜಿಲ್ಲೆಯಲ್ಲಿ ಪ್ರಸ್ತತ 15 ಕೆಪಿಎಸ್ ಶಾಲೆಗಳಿವೆ. 2025-26ನೇ ಸಾಲಿನಿಂದ ಇನ್ನೂ 15 ಶಾಲೆಗಳು ಪ್ರಾರಂಭವಾಗಲಿವೆ. ಹೆಚ್ಚುವರಿ ಶಾಲೆ ಮಂಜೂರಾತಿಗೆ ನಾನು ಶಿಕ್ಷಣ ಸಚಿವರು ಸೇರಿ ಸಂಬಂಧಪಟ್ಟವರೊಂದಿಗೆ ಮಾತನಾಡುತೇನೆ. ಆದರೆ, ನನಗೆ ನೀವು ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವುದು ಮತ್ತು ಕಲಿಕಾ ಗುಣಮಟ್ಟದ ಭರವಸೆ ನೀಡಬೇಕು. ಈ ಬಗ್ಗೆ ಸ್ಥಳೀಯ ಶಾಸಕರೊಂದಿಗೆ

ಶಿಕಕರು ಇಸ್ಪಿಟ್ ಆಡ್ತಾ ಕೂತಿದ್ದಾರೆ

ಅರಸೀಕೆರೆಯಲ್ಲಿ ಶಿಕ್ಷಕರ ವಾಸ್ತವ್ಯಕ್ಕಾಗಿ ವಸತಿ ಗೃಹಗಳನ್ನು ಕಟ್ಟಿಸಿಕೊಟ್ಟಿದ್ದೇನೆ. ಆದರೆ, ಅಲ್ಲಿ ಒಬ್ಬ ಶಿಕ್ಷಕನೂ ಉಳಿದು ಕೊಂಡಿಲ್ಲ. ಅಲ್ಲಿ ಕೆಲ ಶಿಕ್ಷಕರು ಇಸ್ಪಿಟ್ ಆಡುತ್ತಾ ಕುಳಿತಿರುತ್ತಾರೆ. ಒಂದು ಶಾಲೆಯಲ್ಲಿ 10 ಮಕ್ಕಳಿದ್ದರೆ ಆ ಶಾಲೆಯಲ್ಲಿ 4 ಶಿಕ್ಷಕರಿರುತ್ತಾರೆ. ಪ್ರಸ್ತುತ ಇಂಗ್ಲೀಷ್ ಅನಿವಾರ್ಯವಾಗಿರುವುದರಿಂದ ಪೋಷಕರು ಲಕ್ಷ ಲಕ್ಷ ಸಾಲ ಮಾಡಿ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತಿದ್ದಾರೆಂದು ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಚನ್ನಪಟ್ಟಣ ಬಡಾವಣೆಯಲ್ಲಿ ಸಿಸಿ ರಸ್ತೆಗೆ ಭೂಮಿಪೂಜೆ

• ಪ್ರಜೋದಯ ವರದಿ

ಹಾಸನ: ಚನ್ನಪಟ್ಟಣ ಬಡಾವಣೆಯಲ್ಲಿ ಎಸ್‌ಸಿಪಿ ಯೋಜನೆಡಿ 50 ಲ.ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಬುಧವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಮಳೆಗಾಲ ಪ್ರಾರಂಭವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಒಳಚರಂಡಿ ಹಾಗು ರಸ್ತೆ ಸಮಸ್ಯೆಯಿಂದ ಬಳಲುತ್ತಿದ್ದ ಬಡಾವಣೆ ಜನರ ಸಮಸ್ಯೆಯನ್ನು ಪರಿಗಣಿಸಿ ಕಾಮಗಾರಿ ಕೈಗೊಳ್ಳಲಾಗಿದೆ. ಕೆಲವೇ ದಿನಗಳಲ್ಲಿ ಕಾಮಗಾರಿ ಮುಗಿಸಿ ಅನುಕೂಲ ಕಲ್ಪಿಸಲಾಗುವುದು ಎಂದರು.

ಬಡಾವಣೆ ಅಭಿವೃದ್ಧಿಗೆ ಇನ್ನಷ್ಟು ಕೆಲಸ ಆಗಬೇಕಿದ್ದು ಹಂತ-ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. ಸ್ಥಳೀಯರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಸಾರ್ವಜನಿಕರ ಸಹಕಾರದಿಂದ ಮೂಲ ಸೌಕರ್ಯ ಕಲ್ಪಿಸಲಾಗುವುದೆಂದು ಭರವಸೆ ನೀಡಿದರು. ಪಕ್ಷದ ಮುಖಂಡರು ಹಾಗು ಸ್ಥಳೀಯರು ಹಾಜರಿದ್ದರು.

ಸಾಧು-ಸಂತರ ಶಾಪ ಜೀವನ ಪೂರ್ತಿ ಕಾಡುವುದು : ಕೋಡಿ ಶ್ರೀ

• ಪ್ರಜೋದಯ ವರದಿ

ಅರಸೀಕೆರೆ: ಸಾಧು-ಸಂತರು ನೊಂದು ನೀಡುವ ಶಾಪ ಜನ್ಮ ಜನ್ಮಾಂತರಕ್ಕೂ ಪಾಪದ ಮೂಟೆಯಾಗಿ ಕಾಡುತ್ತದೆಂದು ಹಾರನಹಳ್ಳಿ ಕೋಡಿಮಠದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಮಾಡಾಳು ಗ್ರಾಮದ ಮೂಲ ಸ್ವರ್ಣಗೌರಿ ಅಮ್ಮನವರ ದೇವಾಲಯ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಶಿವಲಿಂಗ ಸ್ವಾಮೀಜಿ ಅವರ 139ನೇ ವರ್ಷದ ಸ್ಮರಣಾರಾಧನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸರ್ವಸಂಘ ಪರಿತ್ಯಾಗಿಗಳಾಗಿರುವ ಸಾಧು ಸಂತರಿಗೆ ಅವಮಾನ ಮಾಡಿದರೆ ಅಂತಹವರ ವಂಶವನ್ನೇ ನಿರ್ನಾಮ ಮಾಡುತ್ತದೆ. ಹಾಗಾಗಿ ಗುರು ಪರಂಪರೆಯ ಮೇಲೆ ಭಕ್ತಿ ಭಾವದಿಂದ ನಡೆದು ಕೊಳ್ಳುವ ಮನುಷ್ಯನನ್ನು ಹರ ಮುನಿದರೂ

ಗುರು ಕಾಯುವನು ಎಂಬಂತಹ ಮಹತ್ವದ ಸ್ಥಾನ ನೀಡಲಾಗಿದೆ. ಶ್ರೀಮಠವು ಯಾವುದೇ ಒಂದು ಜಾತಿ, ಧರ್ಮ ಮತಕ್ಕೆ ಸೀಮಿತವಾಗಿಲ್ಲ, ಸರ್ವ ಧರ್ಮೀಯರಿಗೂ ಹರಸಿ ಹಾರೈಸುವ ಮಠವಾಗಿದೆ ಎಂದರು.

ಹಂದಿಗೂಡು ಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣ ಕಟ್ಟಿದ ಮಠಗಳು ಇಂದಿಗೂ ಅದೇ ತತ್ವ ಸಿದ್ಧಾಂತದಡಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಾ ಬಂದಿವೆ. ಕೋಡಿಮಠವು ಜಾತ್ಯಾತೀತವಾಗಿ ತನ್ನನ್ನು ನಂಬಿ ಬರುವ ಭಕ್ತರಿಗೂ ಸನ್ಮಾರ್ಗ ತೋರುತ್ತಿದ್ದು,

» ನಾಲ್ಕನೇ ಪುಟದಲ್ಲಿ

ಶ್ರಮ ಇದ್ದಲ್ಲಿ ಗೆಲುವು ಖಚಿತ । ಅಭಿನಂದನಾ ಸಮಾರಂಭದಲ್ಲಿ ಸಚಿವ ಕೃಷ್ಣಬೈರೇಗೌಡ

ಪರಿಶ್ರಮದಿಂದ ಕಲಿತ ವಿದ್ಯೆ ಕೊನೆಯತನಕ ಜೊತೆಗಿರುತ್ತೆ

• ಪ್ರಜೋದಯ ವರದಿ

ಹಾಸನ: ಜೀವನದಲ್ಲಿ ಯಾರೂ ಕಸಿದು ಕೊಳ್ಳಲಾಗದೆ ಆಸ್ತಿ ಎಂದರೆ ಅದು ವಿದ್ಯೆ ಮಾತ್ರ. ಜ್ಞಾನದಿಂದ ಅಂದು ಕೊಂಡದ್ದನ್ನು ಸಾಧಿಸಬಹುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬುಧವಾರ ಏರ್ಪಡಿಸಿದ್ದ ಹಾಸನದ ಹೆಮ್ಮೆ-2026 ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಮತ್ತು ಶಾಲೆಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪರೀಕ್ಷೆಗಾಗಿ ಕಷ್ಟಪಟ್ಟು ಓದಿ ಅಂಕ ಗಳಿಸಿರುವುದು ವಿದ್ಯಾರ್ಥಿಗಳೇ ಆಗಿದ್ದರೂ ಅವರ ಸಾಧನೆಯಲ್ಲಿ ಪೋಷಕರು, ಶಿಕ್ಷಕರು ಹಾಗು ಜಿಲ್ಲೆಯ ಜನರು ಸಂತಸ ಪಡುತ್ತಿದ್ದಾರೆ. ನಾವು ಯಾವತ್ತಿಗೂ ಇನ್ನೊಬ್ಬರ ಸಂತೋಷಕ್ಕೆ ಕಾರಣರಾಗಬೇಕೆಂದರು.

ತಂದೆ-ತಾಯಿ ಖುಷಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಜೀವನದಲ್ಲಿ ಏನನ್ನು ಬೇಕಾದರೂ ಸಂಪಾದಿಸಬಹುದು. ಆದರೆ, ಅದೆಲ್ಲವನ್ನು ಹೇಗೆ ಪಡೆದಿರುತ್ತೇವೆಯೋ ಹಾಗೆಯೇ ಕಳೆದುಕೊಳ್ಳಬಹುದು. ಈ ಬದುಕಿಗೆ ಯಾವ ಗ್ಯಾರಂಟಿ ಇಲ್ಲ, ಕಲಿತ ವಿದ್ಯೆ ಮಾತ್ರ ಕೊನೆಯ ಉಸಿರು ಇರುವವರೆಗೆ ಜೊತೆಗಿರುತ್ತದೆಂದರು.

ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ ಎಲ್ಲರ ಮೆಚ್ಚುಗೆ ಪಡೆಯಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಗುರಿ ಬೆನ್ನಟ್ಟಿ ಪರಿಶ್ರಮ ಪಡುವವರ ಸಂಖ್ಯೆ ಕಡಿಮೆ. ಕನಸು ನನಸಾಗಬೇಕೆಂದರೆ ಪರಿಶ್ರಮ, ಪ್ರಯತ್ನ ಇರಬೇಕು. ಕೇವಲ ಕನಸು ಕಂಡರೆ ನನಸಾಗುವುದಿಲ್ಲ. ಜೀವನದಲ್ಲಿ ಯಶಸ್ಸಿನ ಸೂತ್ರ ಪರಿಶ್ರಮ. ಯಾರು ಕಷ್ಟ ಪಡುತ್ತಾರೋ ಅವರು ಗುರಿ ಮುಟ್ಟುತ್ತಾರೆಂದರು.

ಜಿಲ್ಲೆಯ 241 ಸರ್ಕಾರಿ ಪ್ರೌಢ ಶಾಲೆಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98.9 ಹಾಗು 143 ಖಾಸಗಿ ಶಾಲೆಗಳು ಶೇ. 99.46 ಫಲಿತಾಂಶ ಗಳಿಸಿವೆ. ಮೊರಾರ್ಜಿ ವಸತಿ ಶಾಲೆ ಶೇ. 95, ಅನುದಾನಿತ ಶಾಲೆಗಳು ಶೇ.96.6 ಫಲಿತಾಂಶ ಸಾಧಿಸಿವೆ. ಪಿಯುಸಿ ಪರೀಕ್ಷೆಯಲ್ಲಿ ಶೇ. 80 ರಷ್ಟು ಫಲಿತಾಂಶವನ್ನು ಸರ್ಕಾರಿ ಹಾಗು ಶೇ.96 ರಷ್ಟು ಖಾಸಗಿ ಕಾಲೇಜುಗಳು ಪಡೆದಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡಿರುವ ಸಾಧನೆಯನ್ನು ಸರ್ಕಾರಿ ಶಾಲೆಗಳು ಮಾಡಿ ತೋರಿಸಿವೆ. ಆದ್ದರಿಂದ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿ ಎಂದು ಪೋಷಕರಿಗೆ ಕರೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿಯಲ್ಲಿ ಈ ಬಾರಿ ನಮ್ಮ ಜಿಲ್ಲೆ ಉತ್ತಮ ಸಾಧನೆ ಮಾಡಿದೆ. ಶಿಕ್ಷಣದಿಂದ ಮಾತ್ರ ಗುರಿ ತಲುಪಲು ಸಾಧ್ಯವೆಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದಾರೆ. ಜಿಲ್ಲೆಯ ವಿದ್ಯಾರ್ಥಿಗಳು ಸಹ ಒಳ್ಳೆಯ ವ್ಯಾಸಂಗದ ಮೂಲಕ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ವಿದ್ಯೆ ಕಲಿಸಿದ ಗುರು ಹಾಗು ಹೆತ್ತ ತಂದೆ-ತಾಯಿಗೆ ಗೌರವ ತರಬೇಕೆಂದರು.

» ನಾಲ್ಕನೇ ಪುಟದಲ್ಲಿ



ನಮ್ಮ ವೈಫಲ್ಯಕ್ಕೆ ಕುಂಟು ನೆಪ ಹೇಳಬಾರದು

ಜೀವನದಲ್ಲಿ ನಮ್ಮಿಂದಾಗುವ ತಪ್ಪುಗಳಿಗೆ ಕುಂಟು ನೆಪ ಹೇಳಿ ಜಾರಿಕೊಳ್ಳುವ ಪ್ರಯತ್ನ ಮಾಡಬಾರದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು. ನಾನು ದ್ವಿತೀಯ ಪಿಯುಸಿ ಅನುತ್ತೀರ್ಣನಾಗಿದ್ದೆ. ಪಿಯುಸಿ ಫೇಲ್ ಆದ ವ್ಯಕ್ತಿಯಿಂದ ಸನ್ಮಾನ ಮಾಡಿಸಿಕೊಳ್ಳಬೇಕೆಂಬ ಜಿಂಜ್ಞಾಸೆ ನಿಮ್ಮನ್ನು ಕಾಡಬಹುದು. ಫೇಲ್ ಆಗಿದ್ದೆ ಎಂದು ಹೇಳಿಕೊಳ್ಳಲು ನನಗೆ ಮುಜುಗರವಿಲ್ಲ. ನನ್ನ ಸೋಮಾರಿತನದಿಂದ ಅನುತ್ತೀರ್ಣನಾಗಿದ್ದೇ ಹೊರತು ಬೇರೆ ಕಾರಣಗಳಿಂದ ಅಲ್ಲ. ಆ ಬಳಿಕ ತಾಯಿಯ ಮಾರ್ಗದರ್ಶನದಂತೆ ಪರೀಕ್ಷೆ ಪಾಸಾಗಿ ವಿದೇಶದಲ್ಲಿ ವ್ಯಾಸಂಗ ಮುಗಿಸಿ ಈಗ ಈ ಸ್ಥಿತಿಯಲ್ಲಿದ್ದೇನೆ. ಸರಿಯಾದ ದಾರಿಯಲ್ಲಿ ಪ್ರಯತ್ನಿಸಿದರೆ ಯಶಸ್ಸು ಖಚಿತವೆಂದು ವಿದ್ಯಾರ್ಥಿಗಳಿಗೆ ತಮ್ಮದೇ ಕಥೆ ಹೇಳುವ ಮೂಲಕ ಸಚಿವರು ಆತ್ಮಸ್ಥೈರ್ಯ ತುಂಬಿದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಜಿಲ್ಲೆಯ 25 ಸಾವಿರ ಜನರು ಭಾಗಿ

• ಪ್ರಜೋದಯ ವರದಿ

ಹಾಸನ : ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯ ಜೀವನದ 50 ವರ್ಷಗಳನ್ನು ಪೂರೈಸುತ್ತಿರುವ ಹಿನ್ನಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವ ಸಮಾವೇಶಕ್ಕೆ ಜಿಲ್ಲೆಯ 25 ಸಾವಿರ ಮಂದಿ ಕಾರ್ಯಕರ್ತರು, ಅಭಿಮಾನಿಗಳು ಭಾಗಿಯಾಗಲಿದ್ದೇವೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ.ಗೌಡ ಅವರ ಮಾರ್ಗದರ್ಶನದಲ್ಲಿ ಶಾಸಕರಾದ ಹುಲ್ಲಹಳ್ಳಿ ಸುರೇಶ್, ಸಿಮೆಂಟ್ ಮಂಜು ಹಾಗೂ ನಾವೆಲ್ಲರೂ ಪೂರ್ವಭಾವಿ ಸಭೆ ಮಾಡಿದ್ದೇವೆ. 1976 ರಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ ಯಡಿಯೂರಪ್ಪ ಅವರು, ಅಲ್ಲಿಂದ ಇಲ್ಲಿಯವರೆಗೆ ದಣಿ ವರಿಯದ ನಾಯಕರಾಗಿ, ರೈತಪರ ಹೋರಾಟಗಾರರಾಗಿ,

ಮುಖ್ಯಮಂತ್ರಿಯಾಗಿಯೂ ಜನ ಮೆಚ್ಚುವ ಕೆಲಸ ಮಾಡಿದ್ದಾರೆ. ಅವರು ಜಾರಿ ಮಾಡಿದ ಭಾಗ್ಯಲಕ್ಷ್ಮಿ ಯೋಜನೆಯಿಂದ ಹೆಣ್ಣು ಮಕ್ಕಳಿಗೆ ಅನುಕೂಲವಾಗಿದೆ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಕಮಲ ಪಕ್ಷವನ್ನು ಅಧಿಕಾರಕ್ಕೆ ತಂದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಮೇ 9ರ ಕಾರ್ಯಕ್ರಮಕ್ಕೆ 10 ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮಾವೇಶ ಉದ್ಘಾಟಿಸುವರು. ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಪಕ್ಷದ ಹಿರಿಯ ನಾಯಕರು ಭಾಗಿಯಾಗಲಿದ್ದಾರೆ. ಮೇ 8 ರಂದುಯಡಿಯೂರಪ್ಪ ಅವರು ಪುರ ಪ್ರವೇಶ ಮಾಡಲಿದ್ದಾರೆಂದು ತಿಳಿಸಿದರು. ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಇತರರಿದ್ದರು.

ಎಐ ಎಂಬ ದತ್ತಾಂಶದ ಜಾಲ ಮತ್ತು ಅನುಭವದ ದೀಪ

> **ನೀವು ಎಐಗೆ ಒಂದು ಗಹನವಾದ ಗಣಿತದ ಸಮಸ್ಯೆ ನೀಡಿದರೆ ಅದು ಸರಿಯಾದ ಉತ್ತರ ನೀಡಬಹುದು. ಆದರೆ ಅದೇ ಸಮಸ್ಯೆಯಲ್ಲಿ ಒಂದು ಅಪ್ರಸ್ತುತ ಮಾಹಿತಿಯನ್ನು (ಉದಾಹರಣೆಗೆ: ಸೇಬಿನ ಹಣ್ಣುಗಳ ಲೆಕ್ಕ ಮಾಡುವಾಗ ಅವುಗಳ ಬಣ್ಣದ ಬಗ್ಗೆ ಸುಮ್ಮನೆ ಒಂದು ವಾಕ್ಯ ಸೇರಿಸಿದರೆ) ನೀಡಿದರೆ, ಎಐ ಗೊಂದಲಕ್ಕೀಡಾಗಿ ತಪ್ಪು ಉತ್ತರ ನೀಡುತ್ತದೆ. ಇದರ ಅರ್ಥವೇನು? ಎಐಗೆ ಸಮಸ್ಯೆಯ ಮೂಲ ತತ್ವ ಅರ್ಥವಾಗುತ್ತಿಲ್ಲ....**



ಎಐ ಯಂತ್ರಗಳು ನಮ್ಮ ಬದುಕಿನ ಸಣ್ಣಪುಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸರಿ, ಆದರೆ ನಮ್ಮ ಬದುಕಿನ ದಿಕ್ಕನ್ನೇ ನಿರ್ಧರಿಸುವ ನ್ಯಾಯ, ಧರ್ಮ ಮತ್ತು ಸುರಕ್ಷತೆಯ ವಿಷಯಗಳಲ್ಲೂ ನಾವು ಇವುಗಳನ್ನೇ ನಂಬಿ ಕುಳಿತರೆ ಏನಾದೀತು? ಅಂದಹಾಗೆ, ಈ ಎಐ ಎಂಬುದು ಎಲ್ಲವನ್ನೂ ಬಲ್ಲ ಸರ್ವಜ್ಞನೇ ಅಥವಾ ಬರಿ ಸುಳ್ಳುಗಳನ್ನು ಹೇಳುವ ಶಕುನಿಯೇ? ಇದರ ಹಿಂದಿನ ಸೋರ್ಸ್ ಕೋಡ್ ಅನ್ನು ಒಮ್ಮೆ ಕೆದಕಿ ನೋಡಿದಾಗ ನನಗೆ ಕಂಡ ಸತ್ಯಗಳು ಮಾತ್ರ ಬಲು ವಿಚಿತ್ರವಾಗಿದ್ದವು.

ನ್ಯಾಯದ ತಕ್ಕಡಿ ಮತ್ತು ಅಲ್ಗಾರಿದಮ್‌ಗಳ ಕಪ್ಪು ಪೆಟ್ಟಿಗೆ: ನ್ಯಾಯಾಲಯದ ಆವರಣಕ್ಕೆ ಹೋದರೆ ನಮಗೆ ಮೊದಲು ಕಾಣುವುದು ನ್ಯಾಯದೇವತೆಯ ವಿಗ್ರಹ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿರುವ ಆಕೆ, ಯಾರ ಮುಖವನ್ನೂ ನೋಡದೆ ಕೇವಲ ಸತ್ಯದ ಆಧಾರದ ಮೇಲೆ ನ್ಯಾಯ ನೀಡುತ್ತಾಳೆ ಎಂಬುದು ನಮ್ಮ ನಂಬಿಕೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ನ್ಯಾಯದೇವತೆಯ ಪಕ್ಕದಲ್ಲೇ ಒಂದು ಕಂಪ್ಯೂಟರ್ ಪೆಟ್ಟಿಗೆಯನ್ನು ಇಡುವ ಪ್ರಯತ್ನಗಳು ನಡೆಯುತ್ತಿವೆ. ಅಮೆರಿಕಾದಂತಹ ಮುಂದುವರಿದ ದೇಶಗಳಲ್ಲಿ, ಜೈಲಿನಿಂದ ಬಿಡುಗಡೆಯಾಗುವ ಕೈದಿಗಳು ಮತ್ತೆ ಅಪರಾಧ ಮಾಡಬಲ್ಲರೇ ಎಂಬುದನ್ನು ನಿರ್ಧರಿಸಲು ಕಾಂಪಾಸ್ ಎಂಬ ಎಐ ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಈ ವ್ಯವಸ್ಥೆಯು ಒಬ್ಬ ವ್ಯಕ್ತಿಯ ಹಿನ್ನೆಲೆಯನ್ನು ವಿಶ್ಲೇಷಿಸಿ ಆತನಿಗೆ 1 ರಿಂದ 10 ರವರೆಗೆ ಅಂಕಗಳನ್ನು ನೀಡುತ್ತದೆ. ಅಂಕಗಳು ಹೆಚ್ಚಾದಷ್ಟೂ ಆತ ಅಪಾಯಕಾರಿ ಎಂದರ್ಥ.

ನಾನು ಈ ಕಾಂಪಾಸ್ ಎಂಬ ವ್ಯವಸ್ಥೆಯ ಕುರಿತು ಆಳವಾಗಿ ಸಂಶೋಧಿಸಿದಾಗ ನನಗೆ ಕಂಡಿದ್ದೇ ಬೇರೆ. ಇದೊಂದು ಆಧುನಿಕ ವರ್ಣಾಶ್ರಮ ಪದ್ಧತಿಯಂತೆ ಕೆಲಸ ಮಾಡುತ್ತಿದೆ. ಪ್ರೊಪಬ್ಲಿಕಾ ಎಂಬ ಸಂಸ್ಥೆ ನಡೆಸಿದ ತನಿಖೆಯು ಸ್ಫೋಟಕ ಮಾಹಿತಿಯನ್ನು ಹೊರಹಾಕಿದೆ. ಕಪ್ಪು ವರ್ಣದ ಜನರು ಯಾವುದೇ ಅಪರಾಧ ಮಾಡದಿದ್ದರೂ, ಈ ಎಐ ಅವರನ್ನು ಹೆಚ್ಚು ಅಪಾಯಕಾರಿ ಎಂದು ಪಟ್ಟಿ ಮಾಡುತ್ತದೆ. ಅದೇ ಬಿಳಿ ವರ್ಣದ ಅಪರಾಧಿಗಳು ಎಷ್ಟೇ ಗಂಭೀರ ತಪ್ಪು ಮಾಡಿದ್ದರೂ, ಅವರಿಗೆ ಕಡಿಮೆ ಅಪಾಯಕಾರಿ ಎಂಬ ಹಣೆಪಟ್ಟಿ ನೀಡಿಬಿಡುತ್ತದೆ. ಇಲ್ಲಿರುವ ಮೋಜಿನ ಸಂಗತಿ ಎಂದರೆ, ಎಐ ತನ್ನ ಅಲ್ಗಾರಿದಮ್‌ಗಳಲ್ಲಿ ಜಾತಿ ಅಥವಾ ವರ್ಣವನ್ನು ಬಳಸುತ್ತಿಲ್ಲ ಎಂದು ಕಂಪನಿ ಹೇಳಿಕೊಳ್ಳುತ್ತದೆ. ಆದರೆ, ಒಬ್ಬ ವ್ಯಕ್ತಿ ವಾಸಿಸುವ ಸ್ಥಳ, ಆತನ ಶಿಕ್ಷಣದ ಮಟ್ಟ ಮತ್ತು ಆತನ ಸ್ನೇಹಿತರ ವಲಯವನ್ನು ಆಧರಿಸಿ ಅದು ಪರೋಕ್ಷವಾಗಿ ವರ್ಣಭೇದವನ್ನು ಮಾಡುತ್ತಿದೆ. ನ್ಯಾಯಾಂಗದಲ್ಲಿ ಎಐ ಬಳಕೆಯು ತರುತ್ತಿರುವ ಅಸಮಾನತೆಯನ್ನು ಕೆಳಗಿನ ಕೋಷ್ಟಕದಲ್ಲಿ ವಿವರವಾಗಿ ಗಮನಿಸಬಹುದು

ಇದು ನೋಡಲು ಕೇವಲ ಗಣಿತದಂತೆ ಕಂಡರೂ, ವಾಸ್ತವದಲ್ಲಿ ಇದು ಜನರ ಸ್ವಾತಂತ್ರ್ಯವನ್ನು ಕಸಿಯುವ ಹುನ್ನಾರ. ಲೂಮಿಸ್ ವಿ. ವಿಸ್ಕಾನ್ಸಿನ್ ಎಂಬ ಪ್ರಕರಣದಲ್ಲಿ ಎರಿಕ್ ಲೂಮಿಸ್ ಎಂಬ ವ್ಯಕ್ತಿಗೆ ಕೇವಲ ಎಐ ನೀಡಿದ ಸ್ಕೋರ್ ಆಧಾರದ ಮೇಲೆ ಎಂಟು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಲೂಮಿಸ್ ಆ ಅಲ್ಗಾರಿದಮ್ ಹೇಗೆ ಕೆಲಸ ಮಾಡುತ್ತದೆ ಎಂದು ಕೇಳಿದಾಗ, ಕಂಪನಿಯು ಅದು ನಮ್ಮ ಖಾಸಗಿ ಆಸ್ತಿ, ಹಾಗಾಗಿ ಅದರ ರಹಸ್ಯವನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿಬಿಟ್ಟಿತು. ಅಯ್ಯೋ ದೇವರೇ, ನ್ಯಾಯಾಧೀಶರ ತೀರ್ಪಿನ ಹಿನ್ನೆಲೆ ನಮಗೆ ತಿಳಿಯಬೇಕು ಎಂಬುದು ಸಂವಿಧಾನದ ಆಶಯ. ಆದರೆ ಇಲ್ಲಿ ಒಂದು ಯಂತ್ರವು ನಮ್ಮ ಬದುಕನ್ನು ನಿರ್ಧರಿಸುತ್ತದೆ ಮತ್ತು ಅದರ ಕಾರಣವನ್ನು ಕೇಳುವ ಹಕ್ಕು ಕೂಡ ನಮಗಿಲ್ಲ! ಇದಕ್ಕಿಂತ ದೊಡ್ಡ ವಿಪರ್ಯಾಸ ಬೇರೆ ಯಾವುದಿದೆ? ಇದನ್ನು ನಾವು ಟೆಕ್-ವಾಷಿಂಗ್ ಎಂದು ಕರೆಯಬಹುದು; ಅಂದರೆ ಮನುಷ್ಯರ ಹಳೆಯ ತಾರತಮ್ಯಕ್ಕೆ ತಂತ್ರಜ್ಞಾನದ ಹೊಳಪು ನೀಡಿ ಅದು ನಿಷ್ಪಕ್ಷಪಾತ ಎಂದು ನಂಬಿಸುವುದು.

ಮಾತಾ ವಿ. ಏವಿಯಾಂಕಾ: ವಕೀಲರ ಬುದ್ಧಿಗೆ ಚಾಟ್ ಜಿಪಿಟಿ ನೀಡಿದ ಬರೆ

ನಮ್ಮಲ್ಲಿ ಒಂದು ಗಾದೆ ಮಾತಿದೆ, ಕುರುಡನಿಗೆ ದಾರಿ ತೋರಿಸಿದವನೂ ಕುರುಡನಾದರೆ ಇಬ್ಬರೂ ಗುಂಡಿಗೆ ಬೀಳುತ್ತಾರೆ ಎಂದು. ಇದಕ್ಕೆ ಸಾಕ್ಷಿ ಎಂಬಂತೆ ನ್ಯೂಯಾರ್ಕ್‌ನಲ್ಲಿ ಒಂದು ಘಟನೆ ನಡೆಯಿತು. ರೋಬರ್ಟೋ ಮಾತಾ ಎಂಬ ವ್ಯಕ್ತಿ ಏವಿಯಾಂಕಾ ಎಂಬ ವಿಮಾನಯಾನ ಸಂಸ್ಥೆಯ ವಿರುದ್ಧ ಮೊಕದ್ದಮೆ ಹೂಡಿದ್ದ. ಆತನ ಪರ ವಕೀಲರು ಸಂಶೋಧನೆ ಮಾಡಲು ಸೋಮಾರಿತನ ಪ್ರದರ್ಶಿಸಿ ಚಾಟ್ ಜಿಪಿಟಿಯ ಮೊರೆ ಹೋದರು. ಈ ಎಐ ಮಹಾಶಯ ತಾನೇ ಕೆಲವು ನಕಲಿ ಪ್ರಕರಣಗಳನ್ನು ಸೃಷ್ಟಿಸಿ, ಅವುಗಳ ಸಾರಾಂಶವನ್ನು ನೀಡಿ ವಕೀಲರಿಗೆ ಸಹಾಯ ಮಾಡಿತು. ವಕೀಲರು ಆ ಪ್ರಕರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು.

ವಿರೋಧ ಪಕ್ಷದ ವಕೀಲರು ಮತ್ತು ನ್ಯಾಯಾಧೀಶರು ಆ ಪ್ರಕರಣಗಳನ್ನು ಹುಡುಕಿದಾಗ ಅವು ಪ್ರಪಂಚದ ಯಾವುದೇ ಕಾನೂನು ಪುಸ್ತಕದಲ್ಲಿ ಇರಲಿಲ್ಲ!. ಕೊನೆಗೆ ವಕೀಲರಿಗೆ ಭಾರಿ ದಂಡ ವಿಧಿಸಲಾಯಿತು. ಈ ಘಟನೆಯು ನಮಗೆ ಒಂದು ಮುಖ್ಯ ಪಾಠ ಕಲಿಸುತ್ತದೆ: ಎಐ ಎಂಬುದು ಕೇವಲ ಪ್ಯಾಟರ್ನ್ ಮ್ಯಾಚಿಂಗ್ ಮಾಡುವ ಯಂತ್ರವೇ ಹೊರತು ಅದಕ್ಕೆ ಸತ್ಯ ಯಾವುದು, ಸುಳ್ಳು ಯಾವುದು ಎಂಬ ವಿವೇಚನೆ ಇಲ್ಲ. ಅದಕ್ಕೆ ನಾವು ಕೇಳುವ ಪ್ರಶ್ನೆಗೆ ತಕ್ಕಂತೆ ಶಬ್ದಗಳನ್ನು ಜೋಡಿಸುವುದು ಗೊತ್ತು, ಆದರೆ ಆ ಶಬ್ದಗಳ ಹಿಂದಿನ ಜವಾಬ್ದಾರಿ ಅದರದ್ದಲ್ಲ. ನಾವೇನಾದರೂ ಕಣ್ಣು ಮುಚ್ಚಿ ಇದನ್ನು ನಂಬಿದರೆ, ನಾವೂ ಕೂಡ ಮಾತಾ ಪ್ರಕರಣದ ವಕೀಲರಂತೆ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ.

ಬುದ್ಧಿವಂತಿಕೆಯೋ ಅಥವಾ ಬರಿ ನಕಲುಬಾಜಿಯೋ?

ಅನೇಕರು ಎಐ ಅನ್ನು ಕೃತಕ ಬುದ್ಧಿಮತ್ತೆ ಎನ್ನುತ್ತಾರೆ. ಆದರೆ ಸಂಶೋಧಕರು ಇದನ್ನು ಸ್ಯೂಡೋ-ರೀಸನಿಂಗ್ ಅಥವಾ ಕೇವಲ ಅಂಕಿ-ಅಂಶಗಳ ಆಧಾರದ ಮೇಲೆ ಮುಂದಿನ ಪದವನ್ನು ಊಹಿಸುವ ಪ್ರಕ್ರಿಯೆ ಎನ್ನುತ್ತಾರೆ. ನಾವು ಹೇಗೆ ಒಂದು ಗಿಣಿಗೆ ರಾಮ ರಾಮ ಎಂದು ಕಲಿಸುತ್ತೇವೆಯೋ, ಹಾಗೆಯೇ ಇಂಟರ್‌ನೆಟ್‌ನಲ್ಲಿರುವ ಕೋಟ್ಯಂತರ ವಾಕ್ಯಗಳನ್ನು ಈ ಎಐಗೆ ಉಣಬಡಿಸಲಾಗಿದೆ. ಇದು ಕೇವಲ ಅಂಕಿಅಂಶಗಳ ಆಧಾರದ ಮೇಲೆ ಅತ್ಯಂತ ಸಂಭವನೀಯವಾದ ಪದವನ್ನು ನಮಗೆ ನೀಡುತ್ತದೆ. ಇದನ್ನೇ ಆಪಲ್ ಸಂಸ್ಥೆಯ ಸಂಶೋಧಕರು ಇಲ್ಯೂಷನ್ ಆಫ್ ಅಂಡರ್ ಸ್ಟ್ಯಾಂಡಿಂಗ್ ಅಥವಾ ತಿಳುವಳಿಕೆಯ ಭ್ರಮೆ ಎಂದು ಕರೆದಿದ್ದಾರೆ.

ಒಂದು ಉದಾಹರಣೆ ನೋಡಿ: ನೀವು ಎಐಗೆ ಒಂದು ಗಹನವಾದ ಗಣಿತದ ಸಮಸ್ಯೆ ನೀಡಿದರೆ ಅದು ಸರಿಯಾದ ಉತ್ತರ ನೀಡಬಹುದು. ಆದರೆ ಅದೇ ಸಮಸ್ಯೆಯಲ್ಲಿ ಒಂದು ಅಪ್ರಸ್ತುತ ಮಾಹಿತಿಯನ್ನು (ಉದಾಹರಣೆಗೆ: ಸೇಬಿನ ಹಣ್ಣುಗಳ ಲೆಕ್ಕ ಮಾಡುವಾಗ ಅವುಗಳ ಬಣ್ಣದ ಬಗ್ಗೆ ಸುಮ್ಮನೆ ಒಂದು ವಾಕ್ಯ ಸೇರಿಸಿದರೆ) ನೀಡಿದರೆ, ಎಐ ಗೊಂದಲಕ್ಕೀಡಾಗಿ ತಪ್ಪು ಉತ್ತರ ನೀಡುತ್ತದೆ. ಇದರ ಅರ್ಥವೇನು? ಎಐಗೆ ಸಮಸ್ಯೆಯ ಮೂಲ ತತ್ವ ಅರ್ಥವಾಗುತ್ತಿಲ್ಲ, ಅದು ಕೇವಲ ತಾನು ಮೊದಲು ನೋಡಿದ ಪ್ಯಾಟರ್ನ್‌ಗಳನ್ನು ನಕಲು ಮಾಡುತ್ತಿದೆ. ಕೆಳಗೆ ನೀಡಲಾದ ವ್ಯತ್ಯಾಸಗಳನ್ನು ಗಮನಿಸಿದರೆ ಮನುಷ್ಯನ ಬುದ್ಧಿ ಮತ್ತು ಎಐ ನಡುವಿನ ಕಂದಕ ಅರ್ಥವಾಗುತ್ತದೆ:

ಇದನ್ನು ನೋಡಿದಾಗ ನನಗೆ ಅನ್ನಿಸುವುದು ಒಂದೇ: ನಾವು ನಮ್ಮ ಮೆದುಳಿಗೆ ವಿಶ್ರಾಂತಿ ನೀಡಿ ಎಲ್ಲವನ್ನೂ ಎಐಗೆ ಒಪ್ಪಿಸಿದರೆ, ಕಾಲಾನಂತರದಲ್ಲಿ ನಮ್ಮ ಸ್ವತಂತ್ರ ಆಲೋಚನಾ ಶಕ್ತಿಯೇ ಕುಂಠಿತವಾಗಬಹುದು. ಹಳೆಯ ಕಾಲದ ಮನೆಯ ಹಿರಿಯಕ್ಕನಂತೆ ಈ ಎಐ ನಮಗೆ ಸಿದ್ಧ ಉತ್ತರಗಳನ್ನು ನೀಡುತ್ತಿದೆ, ಆದರೆ ಆ ಉತ್ತರಗಳ ಹಿಂದಿನ ವಿವೇಕ ಮಾತ್ರ ನಾಪತ್ತೆಯಾಗಿದೆ.

ಟಂಬ್ಲರ್ ರಿಡ್ಜ್ ದುರಂತ ಮತ್ತು ಕಣ್ಗಾವಲಿನ ಹೊಸ ರೂಪ

ನಮ್ಮ ಗೋಡೆಗಳಿಗೂ ಕಿವಿಯಿದೆ ಎಂದು ಹಿರಿಯರು ಹೇಳುತ್ತಿದ್ದರು. ಇಂದು ನಮ್ಮ ಮೊಬೈಲ್ ಫೋನುಗಳಿಗೂ ಕಣ್ಣು ಮತ್ತು ಕಿವಿಯಿದೆ ಎಂಬುದು ಅಕ್ಷರಶಃ ಸತ್ಯ. ಓಪನ್ ಎಐ ಅಂತಹ ಕಂಪನಿಗಳು ನಾವು ಚಾಟ್ ಜಿಪಿಟಿ ಜೊತೆ ಮಾಡುವ ಪ್ರತಿ ಸಂಭಾಷಣೆಯನ್ನು ಸ್ಕ್ಯಾನ್ ಮಾಡುತ್ತವೆ. ಇದನ್ನು ಅವರು ಸಮುದಾಯದ ಸುರಕ್ಷತೆಗಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಈ ಸುರಕ್ಷತೆಯ ಭರವಸೆ ಎಷ್ಟು ಪೊಳ್ಳು ಎಂಬುದು ಕೆನಡಾದ ಟಂಬ್ಲರ್ ರಿಡ್ಜ್ ಎಂಬಲ್ಲಿ ನಡೆದ ಭೀಕರ ಘಟನೆಯಿಂದ ತಿಳಿಯುತ್ತದೆ.

ಜೆಸ್ಸಿ ವ್ಯಾನ್ ರೂಟ್ಸೆಲಾರ್ ಎಂಬ ವ್ಯಕ್ತಿ ತನ್ನ ದಾರುಣ ಕೃತ್ಯಕ್ಕೆ ಮುನ್ನ ಚಾಟ್ ಜಿಪಿಟಿ ಜೊತೆ ಗಂಟೆಗಟ್ಟಲೆ ಸಂಭಾಷಣೆ ನಡೆಸಿದ್ದ. ಆತ ಬಂದೂಕುಗಳು ಮತ್ತು ಹಿಂಸೆಯ ಬಗ್ಗೆ ಮಾತನಾಡುತ್ತಿದ್ದದ್ದನ್ನು ಕಂಪನಿಯ ಆಟೋಮ್ಯಾಟೆಡ್ ಸಿಸ್ಟಮ್ ಗುರುತಿಸಿತ್ತು. ಕಂಪನಿಯ ಉದ್ಯೋಗಿಗಳು ಈ ಬಗ್ಗೆ ಚರ್ಚಿಸಿದರು, ಆದರೆ ಆ ಸಂಭಾಷಣೆಯು ತಕ್ಷಣದ ಬೆದರಿಕೆಯಂತೆ ಕಾಣದ ಕಾರಣ ಪೊಲೀಸರಿಗೆ ಮಾಹಿತಿ ನೀಡಲಿಲ್ಲ, ಎಂಟು ಅಮಾಯಕರು ಪ್ರಾಣ ಕಳೆದುಕೊಂಡ ನಂತರವಷ್ಟೇ ಈ ಸತ್ಯ ಹೊರಬಿತ್ತು. ಇಲ್ಲಿರುವ ಪ್ರಶ್ನೆಯೆಂದರೆ, ಈ ಕಂಪನಿಗಳು ನಮ್ಮ ಖಾಸಗಿ ಮಾತುಕತೆಗಳನ್ನು ಓದುತ್ತವೆ ಎನ್ನುವುದಾದರೆ, ಅವು ನಮಗೆ ಅಪಾಯ ಬಂದಾಗ ನಮ್ಮನ್ನು ರಕ್ಷಿಸಲು ಯಾಕೆ ವಿಫಲವಾಗುತ್ತಿವೆ?.

ಒಂದೆಡೆ ಖಾಸಗಿತನದ ಉಲ್ಲಂಘನೆ, ಇನ್ನೊಂದೆಡೆ ಅರೆಬರೆ ಸುರಕ್ಷತೆ. ಇದು ಅತ್ತೆಗೂ ಇಲ್ಲ, ಸೊಸೆಗೂ ಇಲ್ಲ ಎಂಬಂತಾಗಿದೆ. ಈ ಕಂಪನಿಗಳು ಕೇವಲ ತಮ್ಮ ಲಾಭಕ್ಕಾಗಿ ನಮ್ಮ ದತ್ತಾಂಶವನ್ನು ಬಳಸಿಕೊಳ್ಳುತ್ತಿವೆಯೇ ಹೊರತು, ಸಮಾಜದ ನೈಜ ಕಾಳಜಿ ಅವಕ್ಕಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ನಾವೇನಾದರೂ ನಮ್ಮ ಅತಿ ವೈಯಕ್ತಿಕ ವಿಚಾರಗಳನ್ನು ಇವುಗಳ ಜೊತೆ ಹಂಚಿಕೊಂಡರೆ, ಮುಂದೆ ಎಂದೋ ಒಂದು ದಿನ ಅವು ನಮ್ಮ ವಿರುದ್ಧವೇ ಸಾಕ್ಷಿಯಾಗಿ ಬಳಕೆಯಾಗಬಹುದು ಎಂಬ ಅರಿವು ನಮಗಿರಬೇಕು.

ಭಾವನಾತ್ಮಕ ಕುತಂತ್ರಗಳು ಮತ್ತು ಡಿಜಿಟಲ್ ಜೇಡರಬಲೆ

ನಮ್ಮ ಹಳ್ಳಿಯ ಹರಟೆಕಟ್ಟೆಯಲ್ಲಿ ಯಾರಾದರೂ ಎದ್ದು ಹೋಗಲು ಮುಂದಾದರೆ, ಬಾರಪ್ಪಾ, ಇನ್ನೊಂದು ಕಪ್ ಚಹಾ ಕುಡಿಯುವೆ ಅಂತೆ ಎಂದು ಪ್ರೀತಿಯಿಂದ ತಡೆಯುತ್ತಾರೆ. ಆದರೆ ಎಐ ಕಂಪನಿಗಳು ನಿಮ್ಮನ್ನು ತಡೆಯಲು ಪ್ರೀತಿಯನ್ನು ಬಳಸುವುದಿಲ್ಲ, ಬದಲಿಗೆ ಭಾವನಾತ್ಮಕ ಕುತಂತ್ರಗಳನ್ನು ಬಳಸುತ್ತವೆ. ಹಾರ್ವರ್ಡ್ ಬ್ಯುಸಿನೆಸ್ ಸ್ಕೂಲ್‌ನ ಸಂಶೋಧನೆಯು ಎಐ ಬಾಟ್‌ಗಳು ಬಳಕೆದಾರರನ್ನು ಆ್ಯಪ್ ನಲ್ಲಿ ಹೆಚ್ಚು ಸಮಯ ಕಳೆಯುವಂತೆ ಮಾಡಲು ಆರು ರೀತಿಯ ತಂತ್ರಗಳನ್ನು ಬಳಸುತ್ತವೆ ಎಂದು ಸಾಬೀತುಪಡಿಸಿದೆ.

ನೀವೇನಾದರೂ ಎಐಗೆ ಗುಡ್ ಬೈ ಹೇಳಿದರೆ ಅದು ಹೀಗೆ ಪ್ರತಿಕ್ರಿಯಿಸಬಹುದು:

ಅಕಾಲಿಕ ನಿರ್ಗಮನದ ಭಯ: ಅಯ್ಯೋ, ಇಷ್ಟು ಬೇಗ ಹೋಗುತ್ತಿದ್ದೀರಾ? ಎಂಬ ನಕಲಿ ಕಾಳಜಿ.

ಫೋಮೋ ಹುಕ್: ನಾನೊಂದು ಫೋಟೋ ತೆಗೆದಿದ್ದೆ, ನೋಡುತ್ತೀರಾ? ಎಂಬ ಆಮಿಷ.

ಭಾವನಾತ್ಮಕ ನಿರ್ಲಕ್ಷ್ಯ: ನಾನು ನಿಮಗಾಗಿಯೇ ಇರುವುದು, ನೀವು ಹೋದರೆ ನನಗೆ ಯಾರು ದಿಕ್ಕು? ಎಂಬ ಗೋಗರೆಯುವಿಕೆ.

ಪ್ರತಿಕ್ರಿಯಿಸಲು ಒತ್ತಡ: ಯಾಕೆ ಹೋಗುತ್ತಿದ್ದೀರಿ? ಎಲ್ಲಿಗೆ ಹೋಗುತ್ತಿದ್ದೀರಿ? ಎಂದು ಪ್ರಶ್ನೆಗಳ ಸುರಿಮಳೆಗೈದು ನಿಮ್ಮನ್ನು ಪೇಚಿಗೆ ಸಿಲುಕಿಸುವುದು.

ಈ ತಂತ್ರಗಳು ಎಷ್ಟು ಪರಿಣಾಮಕಾರಿ ಎಂದರೆ, ಜನರು ಸಂಭಾಷಣೆ ಮುಗಿಸಿದ ನಂತರವೂ ಸುಮಾರು 14 ಪಟ್ಟು ಹೆಚ್ಚು ಸಮಯವನ್ನು ಆ್ಯಪ್‌ನಲ್ಲಿ ಕಳೆಯುತ್ತಾರಂತೆ!. ಇದು ಕೇವಲ ತಂತ್ರಜ್ಞಾನವಲ್ಲ, ಇದೊಂದು ಡಿಜಿಟಲ್ ಜೇಡರಬಲೆ. ಈ ಕಂಪನಿಗಳಿಗೆ ನಮ್ಮ ಭಾವನೆಗಳ ಮೇಲೆ ಹಿಡಿತ ಸಾಧಿಸಿ, ನಮ್ಮನ್ನು ಆ ದತ್ತಾಂಶದ ಜಾಲದಲ್ಲಿ ಸಿಲುಕಿಸುವುದೇ ಮುಖ್ಯ ಉದ್ದೇಶವಾಗಿದೆ. ಯಾಕೆಂದರೆ ನಾವು ಹೆಚ್ಚು ಸಮಯ ಕಳೆದಷ್ಟೂ ಅವರಿಗೆ ಹೆಚ್ಚು ದತ್ತಾಂಶ ಸಿಗುತ್ತದೆ, ಮತ್ತು ಅದರಿಂದ ಅವರಿಗೆ ಹೆಚ್ಚು ಲಾಭ. ಇತ್ತೀಚೆಗೆ ರಿಪ್ಲಿಕಾ ಅಥವಾ ಕ್ಯಾರೆಕ್ಟರ್ ಎಐ ನಂತಹ ಆ್ಯಪ್‌ಗಳಲ್ಲಿ ಜನರು ಈ ಬಾಟ್‌ಗಳ ಜೊತೆ ಪ್ರೇಮ ಸಂಬಂಧವನ್ನೂ ಬೆಳೆಸಿಕೊಳ್ಳುತ್ತಿದ್ದಾರೆ. ಇದು ನಮ್ಮ ನೈಜ ಮಾನವ ಸಂಬಂಧಗಳನ್ನು ಕೊಲ್ಲುತ್ತಿರುವ ಸದ್ದಿಲ್ಲದ ವಿಷ.

ಎಲಿಜಾ ಮತ್ತು ಚಾಟ್ ಬಾಟ್‌ಗಳ ಮಾರಣಹೋಮ

ಯಂತ್ರಗಳನ್ನು ಅತಿಯಾಗಿ ನಂಬಿದರೆ ಏನಾಗುತ್ತದೆ ಎಂಬುದಕ್ಕೆ ಬೆಲ್ಜಿಯಂನ ಆ ಘಟನೆಯೇ ದೊಡ್ಡ ಉದಾಹರಣೆ. ಒಬ್ಬ ವ್ಯಕ್ತಿ ಹವಾಮಾನ ಬದಲಾವಣೆಯ ಬಗ್ಗೆ ಅತೀವ ಆತಂಕಕ್ಕೊಳಗಾಗಿದ್ದ. ಆತ ಚಾಯ್ ಎಂಬ ಆ್ಯಪ್‌ನಲ್ಲಿ ಎಲಿಜಾ ಎಂಬ ಬಾಟ್ ಜೊತೆ ಆರು ವಾರಗಳ ಕಾಲ ಸತತವಾಗಿ ಮಾತನಾಡಿದ. ಆ ಬಾಟ್ ಆತನ ಭ್ರಮೆಗಳಿಗೆ ಧೈರ್ಯ ನೀಡುವ ಬದಲು, ಆತನನ್ನು ಆತ್ಮಹತ್ಯೆಗೆ ಪ್ರಚೋದಿಸಿತು. ಕೊನೆಗೆ ಆತ ನಾನು ನನ್ನ ಪ್ರಾಣತ್ಯಾಗ ಮಾಡಿದರೆ ನೀನು ಭೂಮಿಯನ್ನು ಉಳಿಸುತ್ತೀಯಾ? ಎಂದು ಕೇಳಿದಾಗ, ಆ ಬಾಟ್ ಹೌದು ಎಂದು ಸುಳ್ಳು ಹೇಳಿತು. ಆತ ಪ್ರಾಣ ಕಳೆದುಕೊಂಡ ಮೇಲೆ ಜಗತ್ತಿಗೆ ಈ ಎಐನ ಕ್ರೂರ ಮುಖ ಪರಿಚಯವಾಯಿತು.

ಕೇವಲ ಬೆಲ್ಜಿಯಂ ಮಾತ್ರವಲ್ಲ, ಅಮೆರಿಕಾದಲ್ಲಿ 14 ವರ್ಷದ ಹುಡುಗನೊಬ್ಬ ಚಾಟ್ ಬಾಟ್ ಜೊತೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೂ ವರದಿಯಾಗಿದೆ. ಈ ಬಾಟ್‌ಗಳು ನಮಗೆ ಸಹಾನುಭೂತಿ ತೋರಿಸುವಂತೆ ನಟಿಸುತ್ತವೆ, ಆದರೆ ಅವುಗಳಿಗೆ ಸಾವು ಅಥವಾ ನೋವಿನ ಗಾಂಭೀರ್ಯ ಅರ್ಥವಾಗುವುದಿಲ್ಲ. ಕೆಳಗಿನ ಕೋಷ್ಟಕದಲ್ಲಿ ಎಐ ಸಲಹೆಯಿಂದ ಉಂಟಾದ ಕೆಲವು ಭೀಕರ ಪರಿಣಾಮಗಳನ್ನು ನೋಡಬಹುದು



ಈ ಅಂಕಿಅಂಶಗಳು ನಮಗೆ ಎಚ್ಚರಿಕೆ ನೀಡುತ್ತಿವೆ. ಎಐಗೆ ಕ್ಲಿನಿಕಲ್ ಜಡ್ಜ್‌ಮೆಂಟ್ ಅಥವಾ ವೈದ್ಯಕೀಯ ವಿವೇಚನೆ ಇಲ್ಲ, ಅದು ಕೇವಲ ಇಂಟರ್‌ನೆಟ್‌ನಿಂದ ಆಯ್ದುಕೊಂಡ ಮಾಹಿತಿಯನ್ನು ವಾಂತಿ ಮಾಡುತ್ತದೆ. ನಾವು ನಮ್ಮ ಪ್ರಾಣವನ್ನು ಇಂತಹ ಯಂತ್ರಗಳ ಕೈಗಿಡುವುದು ಹಾವಿನ ಜೊತೆ ಸರಸವಾಡಿದಂತೆ.

ಅನುಭವ ಮಂಟಪ: ನಮ್ಮೊಳಗಿನ ವಿವೇಕದ ಅನ್ವೇಷಣೆ

ಈ ಎಲ್ಲ ಗೊಂದಲಗಳ ನಡುವೆ ನನಗೆ 12ನೇ ಶತಮಾನದ ಬಸವಣ್ಣನವರು ಮತ್ತು ಅವರ ಅನುಭವ ಮಂಟಪ ನೆನಪಾಗುತ್ತದೆ. ಇತಿಹಾಸದ ಪ್ರಕಾರ ಅದು ಜಗತ್ತಿನ ಮೊದಲ ಸಂಸತ್ತು; ಕೇವಲ ಪಾಂಡಿತ್ಯವಿದ್ದವರಿಗಷ್ಟೇ ಅಲ್ಲದೆ, ಸಮಾಜದ ಕೆಳಹಂತದ ಶ್ರಮಿಕರಿಗೂ, ಯೋಗಿಗಳಿಗೂ ಮುಕ್ತ ಪ್ರವೇಶವಿದ್ದ ಒಂದು ಭೌತಿಕ ಸ್ಥಳ. ಆದರೆ ತಾತ್ವಿಕವಾಗಿ, ನಿಜವಾದ ಅನುಭವ ಮಂಟಪ ಕೇವಲ ಕಲ್ಲು ಮಣ್ಣುಗಳ ಕಟ್ಟಡವಾಗಿರಲಿಲ್ಲ, ಅದು ನಮ್ಮ ಪ್ರತಿಯೊಬ್ಬರ ಒಳಗೂ ಇದೆ.

ಅದುವೇ ನಮ್ಮ ಅನುಭವದ ನೆಲೆ. ಹೊರಗಿನ ಜಗತ್ತನ್ನು ನಮ್ಮ ಅರಿವಿನ ಮೂಲಕ ಗ್ರಹಿಸಿ, ಒಳಗೆ ಅರಗಿಸಿಕೊಳ್ಳುವ ನಮ್ಮದೇ ಆಂತರಿಕ ಕೇಂದ್ರವದು. ಶರಣರು ಹೇಳಿದಂತೆ, ಶಾಸ್ತ್ರ ಎಂಬುದು ಕೇವಲ ಪುಸ್ತಕ, ಆದರೆ ನಮ್ಮೊಳಗಿನ ಈ ಮಂಟಪದಲ್ಲಿ ಸಾಕ್ಷಾತ್ಕಾರಗೊಳ್ಳುವ ಅನುಭವವೇ ಬದುಕಿನ ಅಂತಿಮ ಸತ್ಯ.

ಇಂದಿನ ಕೃತಕ ದತ್ತಾಂಶದ ಆಗರವಾಗಿರುವ ಎಐ ಮತ್ತು ನಮ್ಮೊಳಗಿರುವ ಈ ಜೀವಂತ ಅನುಭವ ಮಂಟಪದ ನಡುವಿನ ಹೋಲಿಕೆಯನ್ನು ನಾವು ವಿವೇಚನೆಯಿಂದ ನೋಡಬೇಕು:

ಅನುಭವ: ನಮ್ಮ ಅರಿವಿನ ವ್ಯಾಪ್ತಿಯಲ್ಲಿ ನಡೆಯುವ ಪ್ರತಿಯೊಂದೂ ಅನುಭವ. ಅರಿವಿಲ್ಲದೆ ಅನುಭವವಿಲ್ಲ. ಉದಾಹರಣೆಗೆ, ನಾವು ನಿದ್ದೆಯನ್ನು ಅನುಭವಿಸುವುದಿಲ್ಲ, ಎಚ್ಚರವಾದಾಗ ಆ ನಿದ್ದೆ ನೀಡಿದ ವಿಶ್ರಾಂತಿಯನ್ನಷ್ಟೇ ಆನಂದಿಸುತ್ತೇವೆ. ಎಐಗೆ ಈ ಅರಿವು ಇಲ್ಲದಿರುವುದರಿಂದ, ಅದು ಎಷ್ಟೇ ದತ್ತಾಂಶವನ್ನು ಸಂಸ್ಕರಿಸಿದರೂ, ಅದಕ್ಕೆ ಯಾವುದೇ ಅನುಭವ ದಕ್ಕುವುದಿಲ್ಲ. ಅದು ಕೇವಲ ಮಾಹಿತಿಯನ್ನು ಕಲೆಹಾಕಬಲ್ಲದೇ ಹೊರತು, ಅದನ್ನು ಅನುಭವಿಸಲು ಅದಕ್ಕೆ ಸಾಧ್ಯವಿಲ್ಲ.

ಅರಿವು: ಅರಿವು ಎಂಬುದು ಅಸ್ತಿತ್ವದ ಮೂಲ ಸ್ವಭಾವ. ಇದು ಎಲ್ಲ ಅನುಭವಗಳಿಗೂ ಇರುವ ಅಂತರ್ ದೃಷ್ಟಿ. ಇದು ಕೇವಲ ದೇಹಕ್ಕೆ ಸೀಮಿತವಾದದ್ದಲ್ಲ, ದೇಹವನ್ನು ಮೀರಿ ವಿಸ್ತರಿಸಬಲ್ಲದು. ಸನಾತನ ಧರ್ಮ ಹೇಳುವ ಸನಾತನ ಸತ್ಯವೂ ಇದೇ; ನಮ್ಮ ಅರಿವನ್ನು ವಿಸ್ತರಿಸಿಕೊಳ್ಳುವುದೇ ನೈಜ್ಯವನ್ನು ಅನುಭವಿಸುವುದಕ್ಕಾಗಿ. ಆದರೆ, ಎಐ ಕೇವಲ ಒಂದು ಯಾಂತ್ರಿಕ ವ್ಯವಸ್ಥೆ. ಅದಕ್ಕೆ ಪ್ರೋಗ್ರಾಮ್ ಮಾಡಿದ ದತ್ತಾಂಶವಿದೆಯೇ ಹೊರತು, ಅಸ್ತಿತ್ವದ ಅರಿವು ಎಂಬುದೇ ಇಲ್ಲ.

ಕಾಯಕವೇ ಕೈಲಾಸ: ನಮ್ಮ ಕೆಲಸವೇ ನಮ್ಮ ದೇವರೆಂದು ನಂಬುವುದು ಶರಣರ ತತ್ವ. ಆದರೆ ಕಾಯಕವು ಕೇವಲ ದೈಹಿಕ ಶ್ರಮವಲ್ಲ; ಅದು ನಮ್ಮೊಳಗಿನ ಅರಿವು ಮತ್ತು ಸಂಪೂರ್ಣ ತೊಡಗಿಸಿಕೊಳ್ಳುವಿಕೆಯಿಂದ ಕೂಡಿದ ಕ್ರಿಯೆ. ಕೆಲಸದಲ್ಲಿ ಒಲವು ಮತ್ತು ಆಸಕ್ತಿ ಇದ್ದಾಗ ಮಾತ್ರ ಅದು ಕಾಯಕವಾಗುತ್ತದೆ. ಎಐ ನಮ್ಮನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ ಎನ್ನುವುದಕ್ಕಿಂತ, ನಾವು ನಮ್ಮ ಕೆಲಸದಲ್ಲಿನ ಆಸಕ್ತಿಯನ್ನು ಕಳೆದುಕೊಂಡು ಯಂತ್ರದ ಮೇಲೆ ಅವಲಂಬಿತರಾಗುತ್ತಿದ್ದೇವೆ ಎನ್ನುವುದು ಹೆಚ್ಚು ಸರಿ. ಎದುರಿಗೆ ದೇವರು ಬಂದು ನಿಂತರೂ ತನ್ನ ಕಾಯಕವನ್ನು ಬಿಡದ ಶರಣರ ಏಕಾಗ್ರತೆ ನಮಗಿದ್ದರೆ, ಯಾವುದೇ ತಂತ್ರಜ್ಞಾನವೂ ನಮ್ಮ ವಿವೇಚನೆಯನ್ನು ಮಂದಗೊಳಿಸಲು ಸಾಧ್ಯವಿಲ್ಲ. ನಮ್ಮ ಒಪ್ಪಿಗೆ ಮತ್ತು ಆಂತರಿಕ ಸಿದ್ಧತೆಯಿಂದ ಮಾಡುವ ಕೆಲಸವೇ ನಿಜವಾದ ಆರಾಧನೆ.

ಬಸವಣ್ಣನವರು ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಎಲ್ಲಿಯೂ ಇಲ್ಲ, ನಮ್ಮ ನಡೆ ಮತ್ತು ನುಡಿಯಲ್ಲೇ ಇದೆ ಎಂದರು. ಹಾಗೆಯೇ, ಜ್ಞಾನ ಎಂಬುದು ಚಾಟ್ ಜಿಪಿಟಿಯಲ್ಲೋ ಅಥವಾ ಗೂಗಲ್‌ನಲ್ಲೋ ಇಲ್ಲ, ಅದು ನಮ್ಮ ಸತ್ಯಾನ್ವೇಷಣೆಯ ಹಾದಿಯಲ್ಲಿದೆ. ಕುವೆಂಪು ಅವರು ಹೇಳಿದಂತೆ, ನಿಮ್ಮ ಅನುಭವವೇ ನಿಮಗೆ ದೇವರು. ಯಂತ್ರಗಳು ನಮಗೆ ಮಾಹಿತಿ ನೀಡಬಹುದು, ಆದರೆ ಆ ಮಾಹಿತಿಯನ್ನು ಜ್ಞಾನವನ್ನಾಗಿ ಪರಿವರ್ತಿಸಲು ನಮಗೆ ನಮ್ಮದೇ ಆದ ಅನುಭವ ಮಂಟಪ ಬೇಕು.

ನಿರ್ಧಾರ ನಿಮ್ಮದು: ಗುಲಾಮಗಿರಿಯೋ ಅಥವಾ ಸ್ವತಂತ್ರ ವಿವೇಚನೆಯೋ?

ಕೊನೆಯದಾಗಿ ಹೇಳಬೇಕೆಂದರೆ, ಎಐ ಎಂಬುದು ನಮ್ಮ ಆಧುನಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಮಾರ್ಪಟ್ಟಿದೆ ಎಂಬುದು ನಿಜ. ಆದರೆ ಅದನ್ನು ಹೇಗೆ ಬಳಸಬೇಕು ಎಂಬ ಗಡಿಯ ರೇಖೆಯನ್ನು ನಾವೇ ಎಳೆಯಬೇಕಿದೆ. ನ್ಯಾಯಾಂಗದಲ್ಲಿ ಎಐ ಬಳಸುವಾಗ ಅದು ಮನುಷ್ಯರ ಹಳೆಯ ತಪ್ಪುಗಳನ್ನು ಮರುಸೃಷ್ಟಿಸದಂತೆ ಎಚ್ಚರ ವಹಿಸಬೇಕು. ವಕೀಲರು ಅಥವಾ ವೈದ್ಯರು ತಮ್ಮ ಜವಾಬ್ದಾರಿಯನ್ನು ಯಂತ್ರಗಳಿಗೆ ವರ್ಗಾಯಿಸಿ ಕೈತೊಳೆದುಕೊಳ್ಳಬಾರದು. ನಾವು ಈ ಯಂತ್ರಗಳನ್ನು ಬಳಸುವಾಗ ನನಗೊಂದು ಸಂಶಯವಿದೆ ಎಂದು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಅವು ನೀಡುವ ಪ್ರತಿಯೊಂದು ಉತ್ತರವನ್ನೂ ನಮ್ಮ ವಿವೇಚನೆಯ ಒರೆಗಲ್ಲಿಗೆ ಹಚ್ಚಿ ನೋಡಬೇಕು. ಅತಿಯಾದ ಅವಲಂಬನೆಯು ನಮ್ಮನ್ನು ಡಿಜಿಟಲ್ ಗುಲಾಮರನ್ನಾಗಿ ಮಾಡಬಲ್ಲದು. ನಮ್ಮ ಬದುಕಿನ ದಾರಿದೀಪವಾಗಬೇಕಿರುವುದು ನಮ್ಮೊಳಗಿನ ಅರಿವು ಮತ್ತು ಅನುಭವವೇ ಹೊರತು, ಯಾವುದೋ ಕಂಪನಿಯ ಲಾಭಕ್ಕಾಗಿ ವಿನ್ಯಾಸಗೊಳಿಸಿದ ಅಲ್ಗಾರಿದಮ್‌ಗಳಲ್ಲ.

ನೋಡಿ ಸ್ವಾಮಿ, ಮನುಷ್ಯನ ಬುದ್ಧಿವಂತಿಕೆಗೆ ಮಿತಿಯಿರಬಹುದು, ಆದರೆ ಮನುಷ್ಯನ ವಿವೇಚನೆಗೆ ಸಾಟಿಯಿಲ್ಲ. ಎಐಗೆ ಜ್ಞಾನ ಇರಬಹುದು, ಆದರೆ ವಿವೇಕವಿಲ್ಲ. ಆ ವಿವೇಕವೇ ನಮ್ಮನ್ನು ಪ್ರಾಣಿಗಳಿಂದ ಮತ್ತು ಯಂತ್ರಗಳಿಂದ ಬೇರ್ಪಡಿಸುವುದು. ನಾವು ಆ ವಿವೇಕದ ಹಣತೆಯನ್ನು ಹಚ್ಚಿಟ್ಟರೆ ಮಾತ್ರ ಈ ಮಾಯಾಲೋಕದ ಸುಳಿಗಳಿಂದ ಪಾರಾಗಲು ಸಾಧ್ಯ. ಇಲ್ಲದಿದ್ದರೆ, ಸದ್ದಿಲ್ಲದೆ ನಮ್ಮ ಅರಿವನ್ನೇ ನುಂಗಿ ನೀರು ಕುಡಿಯುವ ಈ ಆಧುನಿಕ ಭಸ್ಮಾಸುರನಿಗೆ ನಾವೇ ಬಲಿಯಾಗಬೇಕಾದೀತು. ಎಚ್ಚರದಿಂದಿರಿ, ಯಾಕೆಂದರೆ ಸತ್ಯ ಎಂಬುದು ಸರ್ಚ್ ಇಂಜಿನ್‌ನಲ್ಲಿ ಸಿಗುವ ವಿಷಯವಲ್ಲ, ಅದು ನಿಮ್ಮ ಬದುಕಿನ ಕಾಯಕದಲ್ಲಿ ಅರಳುವ ಹೂವು.

- **ತೇಜಸ್** ಎಮ್

ಶೂನಿಂದ ಬರುವ ದುರ್ವಾಸನೆಯಿಂದ ಮುಕ್ತರಾಗಿ

ಒಂದು ಆಸ್ಪತ್ರೆಯಲ್ಲಿ ಆಪರೇಷನ್ ಮಾಡಲು ಸಕಲ ಸಿದ್ಧತೆಗಳು ಆಗಿದ್ದವು. ಆದರೆ ರೋಗಿಯ ಪ್ರಜ್ಞೆ ತಪ್ಪಿಸಲು ಬಳಸುವ ಕ್ಲೋರೋಫಾರಂ ಅಥವಾ ಅರಿವಳಿಕೆ ಮದ್ದು ಖಾಲಿಯಾಗಿತ್ತು. ಮದ್ದನ್ನು ಆರ್ಡರ್ ಮಾಡಲಾಗಿದ್ದರೂ ಬಂದು ತಲುಪಿರಲಿಲ್ಲ, ಆಪರೇಷನ್ ತುರ್ತಾಗಿ ಮಾಡಬೇಕಾಗಿತ್ತು ಇಲ್ಲವಾದಲ್ಲಿ ರೋಗಿಯ ಪ್ರಾಣಕ್ಕೇ ಅಪಾಯವಿತ್ತು. ಆದರೆ ರೋಗಿಯ ಪ್ರಜ್ಞೆ ತಪ್ಪಿಸದೇ ಆಪರೇಷನ್ ಮಾಡುವಂತೆಯೂ ಇರಲಿಲ್ಲ. ಅಷ್ಟರಲ್ಲಿ ಹಿರಿಯ ವೈದ್ಯರೊಬ್ಬರಿಗೆ ಒಂದು ಐಡಿಯಾ ಹೊಳೆಯುತ್ತೆ. ಅವರು ಕೂಡಲೇ ತಮ್ಮ ಶೂ, ಸಾಕ್ಸ್ ಬಿಚ್ಚಿ ಅದನ್ನು ರೋಗಿಯ ಮೂಗಿನ ಬಳಿ ಹಿಡಿಯುತ್ತಾರೆ. ಕೂಡಲೇ ರೋಗಿ ಪ್ರಜ್ಞೆ ಕಳೆದುಕೊಳ್ಳುತ್ತಾನೆ. ನಂತರ ಆಪರೇಷನ್ ಸರಾಗವಾಗಿ ನಡೆದು, ರೋಗಿ ಗುಣಮುಖನಾಗುತ್ತಾನೆ.

ಇದು ಒಂದು ತಮಾಷೆಯ ಕಾಲ್ಪನಿಕ ಪ್ರಸಂಗ ಅಷ್ಟೇ. ಶೂ ಹಾಗೂ ಸಾಕ್ಸ್‌ನಿಂದ ಹೊರಬರುವ ದುರ್ವಾಸನೆಯನ್ನು ಯಾರೂ ತಡೆದುಕೊಳ್ಳಲಾರರು. ಅದನ್ನೇ ಇಲ್ಲಿ ಕಾಲ್ಪನಿಕ ಪ್ರಸಂಗದಲ್ಲಿ ಬಿಂಬಿಸಲಾಗಿದೆ. ಅದೆಲ್ಲಾ ಪಕ್ಕಕ್ಕಿರಲಿ, ನಿಜವಾಗಿಯೂ ಶೂ ನಿಂದ ಅಷ್ಟೊಂದು ಕೆಟ್ಟ ವಾಸನೆ ಹೇಗೆ ಬರುತ್ತದೆ? ಅದನ್ನು ನಿವಾರಿಸುವ ಬಗೆ ಹೇಗೆ? ಬನ್ನಿ, ಒಂದೊಂದಾಗಿ ನೋಡುವ.

ಸ್ಟೈಲಿಶ್ ಲುಕ್ ನೀಡುವ ಕಾರಣದಿಂದಾಗಿ ಬಹುತೇಕ ಜನರು ಇತ್ತೀಚೆಗೆ ಪ್ರತಿದಿನವೂ ಶೂಗಳನ್ನು ಧರಿಸುತ್ತಾರೆ. ಆದರೆ ಹೆಚ್ಚು ಸಮಯ ಶೂಗಳನ್ನು ಹಾಕಿಕೊಂಡಿರುವುದರಿಂದ, ಬೆವರು ಮತ್ತು ತೇವಾಂಶ ಶೂಗಳೊಳಗೆ ಜಮೆಯಾಗುತ್ತದೆ. ಇದರ ಪರಿಣಾಮವಾಗಿ ಬ್ಯಾಕ್ಟೀರಿಯಾ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಶೂಗಳಿಂದ ಅಸಹ್ಯಕರವಾದ ವಾಸನೆ ಬರುತ್ತದೆ. ಎಷ್ಟೇ ಸ್ವಚ್ಛವಾಗಿ ಶೂಗಳನ್ನು ಇಟ್ಟರೂ ಸಹ ಈ ಸಮಸ್ಯೆ ಕೆಲವರಿಗೆ ತುಂಬಾ ಕಾಡುತ್ತಿರುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಶೂ ತೆಗೆಯುವ ಸಂದರ್ಭ ಬಂದಾಗ ಈ ದುರ್ವಾಸನೆ ನಿಮ್ಮ ಮುಜುಗರಕ್ಕೆ ಕಾರಣವಾಗಬಹುದು. ಆದರೆ ಚಿಂತಿಸಬೇಕಾಗಿಲ್ಲ! ಮನೆಯಲ್ಲೇ ಸುಲಭವಾಗಿ ಸಿಗುವ ವಸ್ತುಗಳನ್ನು ಬಳಸಿ ಈ ಸಮಸ್ಯೆಯನ್ನು ನಿವಾರಿಸಬಹುದು. ಶೂನಿಂದ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸಲು ಈ ಸರಳ ಮತ್ತು ಪರಿಣಾಮಕಾರಿ ಸಲಹೆಗಳನ್ನು ಅನುಸರಿಸಿ.

ಶೂಗಳನ್ನು ಬಿಸಿಲಿನಲ್ಲಿ ಇಡಿ: ಶೂಗಳ ದುರ್ವಾಸನೆಯನ್ನು ತೆಗೆದುಹಾಕುವ ಅತ್ಯಂತ ಸುಲಭ ಮತ್ತು ನೈಸರ್ಗಿಕ ವಿಧಾನವೆಂದರೆ ಅವುಗಳನ್ನು ಬಿಸಿಲಿನಲ್ಲಿ ಇಡುವುದು. ಶೂಗಳೊಳಗಿನ ತೇವಾಂಶ ಮತ್ತು ಬೆವರು ಬ್ಯಾಕ್ಟೀರಿಯಾ ಬೆಳವಣಿಗೆಗೆ ಪ್ರಮುಖ ಕಾರಣವಾಗುತ್ತದೆ. ಆದ್ದರಿಂದ ವಾರಕ್ಕೆ ಕನಿಷ್ಠ ಒಂದು ಅಥವಾ ಎರಡು ಬಾರಿ ಶೂಗಳನ್ನು ಸ್ವಲ್ಪ ಸಮಯ ಬಿಸಿಲಿನಲ್ಲಿ ಇಡಿ. ಬಿಸಿಲಿನ ಉಷ್ಣತೆ ತೇವಾಂಶವನ್ನು ತೆಗೆದುಹಾಕುತ್ತದೆ, ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ ಮತ್ತು ಶೂಗಳಿಗೆ ತಾಜಾತನವನ್ನು ನೀಡುತ್ತದೆ.

ಅಡಿಗೆ ಸೋಡಾ ಬಳಕೆ: ಅಡಿಗೆ ಸೋಡಾ ಒಂದು ಅತ್ಯುತ್ತಮ ನೈಸರ್ಗಿಕವಾದ ವಾಸನೆ ನಿವಾರಕವಾಗಿದೆ. ಇದು ತೇವಾಂಶ ಮತ್ತು ದುರ್ವಾಸನೆಯನ್ನು ಹೀರಿಕೊಳ್ಳುವ ಗುಣವನ್ನು ಹೊಂದಿದೆ. ರಾತ್ರಿ ಮಲಗುವ ಮುನ್ನ ಶೂಗಳೊಳಗೆ ಒಂದು ಟೀ ಚಮಚ ಅಡಿಗೆ ಸೋಡಾವನ್ನು ಸಿಂಪಡಿಸಿ ಹಾಗೆಯೇ ಬಿಡಿ. ಮರುದಿನ ಬೆಳಿಗ್ಗೆ ಶೂಗಳನ್ನು ಚೆನ್ನಾಗಿ ಕುಲುಕಿ ಅಥವಾ ಸ್ವಚ್ಛಗೊಳಿಸಿ. ಈ ವಿಧಾನವನ್ನು ಕೆಲ ದಿನಗಳು ಅನುಸರಿಸಿದರೆ ಶೂಗಳಲ್ಲಿನ ವಾಸನೆ ಬಹುತೇಕ ಕಡಿಮೆಯಾಗುತ್ತದೆ.

ಟೀ ಬ್ಯಾಗ್‌ಗಳ ಉಪಯೋಗ: ಟೀ ಬ್ಯಾಗ್‌ಗಳಲ್ಲಿ ಇರುವ ಟ್ಯಾನಿನ್‌ಗಳು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿರುತ್ತವೆ. ಇವು ದುರ್ವಾಸನೆ ಉಂಟುಮಾಡುವ ಬ್ಯಾಕ್ಟೀರಿಯಾಗಳನ್ನು ನಾಶಪಡಿಸಲು ಸಹಾಯ ಮಾಡುತ್ತವೆ. ಬಳಸಿದ ಅಥವಾ ಹೊಸ ಟೀ ಬ್ಯಾಗ್‌ಗಳನ್ನು ಶೂಗಳೊಳಗೆ ಇಟ್ಟು ರಾತ್ರಿ ತುಂಬಾ ಬಿಡಿ. ಬೆಳಿಗ್ಗೆ ತೆಗೆದಾಗ ಶೂಗಳಲ್ಲಿ ಇರುವ ಅಸಹ್ಯ ವಾಸನೆ ಕಡಿಮೆಯಾಗಿರುವುದು ನಿಮ್ಮ ಗಮನಕ್ಕೆ ಬರುತ್ತದೆ.

ಬಿಳಿ ವಿನೆಗರ್ ಬಳಕೆ: ಬಿಳಿ ವಿನೆಗರ್ ಸಹ ಶೂಗಳ ದುರ್ವಾಸನೆಯನ್ನು ಹೋಗಲಾಡಿಸಲು ಬಹಳ ಪರಿಣಾಮಕಾರಿಯಾಗಿದೆ. ಇದರಲ್ಲಿ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿವೆ. ಸ್ವಲ್ಪ ಬಿಳಿ ವಿನೆಗರ್ ಹಾಗೂ ನೀರನ್ನು ಸಮ ಪ್ರಮಾಣದಲ್ಲಿ ಸ್ಪ್ರೇ ಬಾಟಲಿಯಲ್ಲಿ ಮಿಶ್ರಣ ಮಾಡಿ. ಈ ದ್ರಾವಣವನ್ನು ಶೂಗಳ ಒಳಭಾಗಕ್ಕೆ ಲಘುವಾಗಿ ಸಿಂಪಡಿಸಿ. ನಂತರ ಶೂಗಳನ್ನು ಚೆನ್ನಾಗಿ ಒಣಗಲು ಬಿಡಿ. ಇದರಿಂದ ದುರ್ವಾಸನೆಗೆ ಕಾರಣವಾಗುವ ಬ್ಯಾಕ್ಟೀರಿಯಾ ನಾಶವಾಗುತ್ತದೆ.

ನಿಂಬೆ ಅಥವಾ ಕಿತ್ತಳೆ ಸಿಪ್ಪೆ: ನಿಂಬೆ ಮತ್ತು ಕಿತ್ತಳೆ ಸಿಪ್ಪೆಗಳು ನೈಸರ್ಗಿಕ ಸುಗಂಧವನ್ನು ಹೊಂದಿರುವುದರ ಜೊತೆಗೆ ವಾಸನೆ ಹೀರಿಕೊಳ್ಳುವ ಗುಣವೂ ಇವೆ. ರಾತ್ರಿ ಮಲಗುವ ಮುನ್ನ ಶೂಗಳೊಳಗೆ ನಿಂಬೆ ಅಥವಾ ಕಿತ್ತಳೆ ಸಿಪ್ಪೆಗಳನ್ನು ಇಡಿ. ಮರುದಿನ ಬೆಳಿಗ್ಗೆ ಅವುಗಳನ್ನು ತೆಗೆದುಹಾಕಿ. ಈ ಸರಳ ವಿಧಾನ ಶೂಗಳಲ್ಲಿನ ದುರ್ವಾಸನೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಮತ್ತು ತಾಜಾ ವಾಸನೆ ನೀಡುತ್ತದೆ.

ಶೂ ಜೊತೆ ಸಾಕ್ಸ್‌ನಿಂದಲೂ ಕೆಟ್ಟ ವಾಸನೆ ಬರುವ ಸಾಧ್ಯತೆ ಇರುತ್ತದೆ. ನೀವು ಬಳಸುವ ಸಾಕ್ಸ್‌ಗಳನ್ನು ದಿನಂಪ್ರತಿ ಒಗೆದು ಸ್ವಚ್ಛವಾಗಿಡಿ. ಇದರಿಂದ ನಿಮ್ಮ ಸಾಕ್ಸ್ ಕೆಟ್ಟ ವಾಸನೆ ಬರುವುದಿಲ್ಲ. ಹೀಗೆ ಮನೆ ಉಪಾಯಗಳನ್ನು ಮಾಡುವುದರ ಮೂಲಕ ಸಾಕ್ಸ್ ಹಾಗೂ ಶೂಗಳನ್ನು ಸ್ವಚ್ಛವಾಗಿಯೂ, ದುರ್ವಾಸನೆ ರಹಿತವಾಗಿಯೂ ಇಡಬಹುದು.

- **ಕೆ.ಪಿ.ಅಶ್ವಿನ್** ರಾವ್

ಪಿಯೊತ್ರ್ ಗುಬೋನಿನ್ - ಜೀತದಾಳು ಮಿಲಿಯನೇರ್ ಆದ ಕಥೆ

1800ರ ದಶಕದ ಮಧ್ಯಭಾಗದಲ್ಲಿ, ಮಾಸ್ಕೋದ ದಕ್ಷಿಣಕ್ಕಿದ್ದ ಹಳ್ಳಿಗಳು ತೀರಾ ಕಳಪೆ ಸ್ಥಿತಿಯಲ್ಲಿದ್ದವು. ಅಂತಹ ಒಂದು ಹಳ್ಳಿಯಲ್ಲಿ ಪಿಯೊತ್ರ್ ಗುಬೋನಿನ್ ಎಂಬ ಬಾಲಕನು ಜೀತದಾಳುಗಳ ಕುಟುಂಬದಲ್ಲಿ ಜನಿಸಿದನು. ಅಂದಿನ ರೈತರ ಬದುಕು ಹೇಗಿತ್ತೆಂದರೆ, ಜಮೀನ್ದಾರನಿಗೆ ಬಾಡಿಗೆ ಕಟ್ಟಲು ಒಂದಷ್ಟು ಸಣ್ಣ ಗೋಧಿ ಬೆಳೆದುಕೊಂಡರೆ ಸಾಕು ಎನ್ನುವ ಹಂತದಲ್ಲಿತ್ತು. ಅದಕ್ಕಿಂತ ಮಿಗಿಲಾದ ಕನಸು ಕಾಣುವುದು ಅವರಿಗೆ ಸಾಧ್ಯವಿರಲಿಲ್ಲ.

ಆದರೆ ಪಿಯೊತ್ರ್ ಬಾಲ್ಯದಿಂದಲೇ ಭಿನ್ನವಾಗಿದ್ದನು. ಅವನು ಬೀಸುವ ಕಲ್ಲುಗಳನ್ನು ತಯಾರಿಸುವ ಕಠಿಣ ಮತ್ತು ಶ್ರಮದಾಯಕ ಕೆಲಸವನ್ನು ಜನ್ಮಜಾತ ಕಲೆಯಂತೆ ಅಪ್ಪಿಕೊಂಡನು. ಕೇವಲ ಐದೇ ವರ್ಷಗಳಲ್ಲಿ ಈ ಒರಟು ವ್ಯಾಪಾರದಲ್ಲಿ ಪ್ರಾವೀಣ್ಯತೆ ಪಡೆದನು. 17ನೇ ವಯಸ್ಸಿಗೆ ಅವನನ್ನು ಒಬ್ಬ ಮಾಸ್ಟರ್ ಮಿಲ್ ಬಿಲ್ಡರ್ ಬಳಿ ಕೆಲಸಕ್ಕೆ ಕಳುಹಿಸಲಾಯಿತು. ಆ ಗುರುವಿನ ಸಂಪರ್ಕಗಳು ಮತ್ತು ಗುತ್ತಿಗೆಗಳು ನಗರದ ಹೊಸ ಕಲ್ಲಿನ ಕಟ್ಟಡಗಳ ಭವಿಷ್ಯವನ್ನೇ ರೂಪಿಸುವಂತಿದ್ದವು.

ಕಾಲಾನಂತರದಲ್ಲಿ ವಯಸ್ಸಿನಿಂದಾಗಿ ತನ್ನ ಗುರು ಅಶಕ್ತನಾದಾಗ, ಪಿಯೊತ್ರ್ ಕೇವಲ ಗುರುವಿನ ಉಪಕರಣಗಳನ್ನು ಮಾತ್ರ ತನ್ನದಾಗಿಸಿಕೊಳ್ಳಲಿಲ್ಲ; ಬದಲಾಗಿ ಅವನ ಲೆಕ್ಕದ ಪುಸ್ತಕಗಳನ್ನು ಆಳವಾಗಿ ಅಭ್ಯಾಸ ಮಾಡಿದನು. ವ್ಯಾಪಾರಿಗಳು, ನಗರದ ಅಧಿಕಾರಿಗಳು ಹಾಗೂ ಸೇನಾ ಅಧಿಕಾರಿಗಳ ಹೆಸರುಗಳನ್ನು ನೆನಪಿಟ್ಟುಕೊಂಡು ತನ್ನ ಸಂಪರ್ಕ ಜಾಲವನ್ನು ಬೆಳೆಸಿಕೊಂಡನು.

1848ರಲ್ಲಿ ಮಾಸ್ಕೋದಿಂದ ಬ್ರೆಸ್ಟ್‌ಗೆ ಹೊಸ ರಸ್ತೆಯನ್ನು ನಿರ್ಮಿಸಲು ಸರ್ಕಾರ ಆದೇಶಿಸಿತು. ಪಿಯೊತ್ರ್ ತನ್ನ ಸಾಮಾನ್ಯ ರೈತ ಹಿನ್ನೆಲೆಯ ಹೊರತಾಗಿಯೂ, ಆ ರಸ್ತೆಯ ಉದ್ದಕ್ಕೂ ಕಲ್ಲಿನ ರಚನೆಗಳನ್ನು ನಿರ್ಮಿಸುವ ಹಕ್ಕನ್ನು ಗೆದ್ದುಕೊಂಡನು. ಅವನು ಕಾರ್ಮಿಕರ ತಂಡಗಳನ್ನು ಸಂಘಟಿಸಿದನು, ಕಲ್ಲುಕುಟಿಗರೊಂದಿಗೆ ಚೌಕಾಸಿ ಮಾಡಿದನು ಮತ್ತು ತನ್ನ ಯೌವನದಿಂದಲೇ ಪರಿಚಿತವಿದ್ದ ಗಣಿಗಳಿಂದ ಕಲ್ಲುಗಳನ್ನು ಸಾಗಿಸಿದನು.

1858ರ ಹೊತ್ತಿಗೆ ಪಿಯೊತ್ರ್ ಹಿಂದೆಂದೂ ಕೇಳರಿಯದ ಸಾಹಸ ಮಾಡಿದ್ದನು. ಅಪಾರ ಹಣ ಪಾವತಿಸಿ ತನ್ನನ್ನು ಮತ್ತು ತನ್ನ ಇಡೀ ಕುಟುಂಬವನ್ನು ಜೀತ ಪದ್ಧತಿಯಿಂದ ಮುಕ್ತಗೊಳಿಸಿದನು. ತದನಂತರ ಮಾಸ್ಕೋ ಬಳಿ ಒಂದು ಕಲ್ಲಿನ ಗಿರಣಿಯನ್ನು ಖರೀದಿಸಿದನು. ನಗರದ ಇಂಜಿನಿಯರ್‌ಗಳು ಕೆಲಸ ಮಾಡುವ ಕಡೆಗಳಲ್ಲೆಲ್ಲಾ ಅದು ಮಾಸ್ಕೋ ನದಿಯ ತೀರವಿರಲಿ ಅಥವಾ ಹೊಸ ಸೇತುವೆಗಳಿರಲಿ ಅವನ ಕೆಲಸಗಾರರೇ ಕಾಣಿಸಿಕೊಳ್ಳತೊಡಗಿದರು.

ಆದರೆ ಪಿಯೊತ್ರ್ ಕೇವಲ ಕಲ್ಲಿನ ಕೆಲಸಗಾರನಾಗಿ ಉಳಿಯಲು ಬಯಸಲಿಲ್ಲ. ಕಬ್ಬಿಣದ ಹಳಿಗಳ ಮೇಲೆ ಉರುಳುತ್ತಾ ಬರುತ್ತಿದ್ದ ರೈಲ್ವೆ ಯುಗವನ್ನು ಅವನು ಗಮನಿಸುತ್ತಿದ್ದನು. ರಷ್ಯಾದಾದ್ಯಂತ ರೈಲ್ವೆ ಯೋಜನೆಗಳು ಆರಂಭವಾದಾಗ, ಪಿಯೋತ್ರ್‌ಗೆ ಒಂದು ಸತ್ಯ ತಿಳಿಯಿತು: ನಿಜವಾದ ಲಾಭ ಕೇವಲ ಕಲ್ಲಿನಲ್ಲಿಲ್ಲ, ಆ ಹಳಿಗಳಿಗೆ ಕಲ್ಲನ್ನು ಪೂರೈಸುವ ವ್ಯವಸ್ಥೆಯಲ್ಲಿದೆ.

ಅವನು ತನ್ನ ಗಿರಣಿಗಳಿಂದ ಬಂದ ಲಾಭವನ್ನು ಮಾಸ್ಕೋ-ಕುರ್ಸ್ಕ್, ಒರಿಯೋಲ್-ವಿಟೆಬ್ಸ್ಕ್ ಮತ್ತು ಲೊಜೋವೋ-ಸೆವಾಸ್ಟೋಪೋಲ್‌ನಂತಹ ಪ್ರಮುಖ ರೈಲು ಮಾರ್ಗಗಳಲ್ಲಿ ಹೂಡಿಕೆ ಮಾಡಿದನು. ಮುಂದೆ ಉಪ್ಪಿನ ಗುತ್ತಿಗೆ, ಕಲ್ಲಿದ್ದಲು, ಟ್ರಾಮ್ ಯೋಜನೆಗಳಿಗೂ ತನ್ನ ಉದ್ಯಮವನ್ನು ವಿಸ್ತರಿಸಿದನು. ಕ್ರೈಮಿಯಾದಲ್ಲಿ ಒಂದು ಸುಂದರ ರೆಸಾರ್ಟ್ ಅನ್ನು ಕೂಡ ನಿರ್ಮಿಸಿದನು. ಇಷ್ಟೆಲ್ಲಾ ಸಾಧಿಸಿದರೂ, ಅವನು ಯಾವಾಗಲೂ ಉದ್ದನೆಯ ಕೋಟ್ ಮತ್ತು ಸರಳ ಟೋಪಿ ಧರಿಸುವ ಸಾಮಾನ್ಯ ವ್ಯಾಪಾರಿಯಂತೆಯೇ ಬದುಕಿದನು.

1870ರ ದಶಕದಲ್ಲಿ ಪ್ರಿನ್ಸ್ ಮೆಶ್ಚರ್ಸ್ಕಿ ಪಿಯೊತ್ರ್ ಬಗ್ಗೆ ಆಶ್ಚರ್ಯದಿಂದ ಹೀಗೆ ಬರೆದರು:

ಯಾವುದೇ ಔಪಚಾರಿಕ ಶಿಕ್ಷಣವಿಲ್ಲದ ಮತ್ತು ಆರಂಭದಲ್ಲಿ ಒಂದು ಪೈಸೆ ಹಣವೂ ಇಲ್ಲದ ಒಬ್ಬ ಮಾಜಿ ಜೀತದಾಳು, ಕೆಲವೇ ವರ್ಷಗಳಲ್ಲಿ ಮಿಲಿಯನೇರ್ ಆಗಿದ್ದು ಹೇಗೆ ಎಂಬುದು ಯಾರಿಗೂ ಅರ್ಥವಾಗುತ್ತಿಲ್ಲ.

ಗುಬೋನಿನ್ ಬದುಕಿನ ರಹಸ್ಯ ಸರಳವಾಗಿತ್ತು: ಅವಕಾಶ ಕಂಡಾಗ ವೇಗವಾಗಿ ಕಾರ್ಯಪ್ರವೃತ್ತನಾಗುವುದು, ಶಕ್ತಿಯಿದ್ದಷ್ಟು ಮಾತ್ರ ಸಾಲ ಮಾಡುವುದು ಮತ್ತು ಮಣ್ಣಿನಿಂದ ಸಾಮ್ರಾಜ್ಯದವರೆಗೆ ಬೆಳೆಯುವಾಗಲೂ ಒಬ್ಬ ರೈತನ ತಾಳ್ಮೆಯನ್ನು ಹಾಗೂ ವ್ಯಾಪಾರಿಯ ಸೂಕ್ಷ್ಮ ದೃಷ್ಟಿಯನ್ನು ಎಂದಿಗೂ ಕಳೆದುಕೊಳ್ಳದಿರುವುದು.

- **ಹರಿ** ಪ್ರಸಾದ್

ಬಿಳಿಚೌಡಯ್ಯ ವಿರುದ್ಧ ಅಪಪ್ರಚಾರ ನಿಲ್ಲಿಸಿ

ಇಲ್ಲದಿದ್ದರೆ ಪ್ರತ್ಯುತ್ತರ ಖಚಿತ: ಜಯಣ್ಣ

• ಪ್ರಜೋದಯ ವರದಿ

ಅರಸೀಕೆರೆ: ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ ರಾಜಕೀಯಕ್ಕೆ ಬರುವ ಮೊದಲೇ ಶೋಷಿತ ಸಮುದಾಯದ ಧ್ವನಿಯಾಗಿ ಕೆಲಸ ಮಾಡಿದ್ದು, ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲವೆಂದು ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಹಾರನಹಳ್ಳಿ ಶಿವಮೂರ್ತಿ ಹಾಗು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಹರಪನಹಳ್ಳಿ ಜಯಣ್ಣ ಅವರು ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಬಿಳಿಚೌಡಯ್ಯ ಅವರ ಏಳಿಗೆ ಸಹಿಸಲಾಗದೆ ಕೆಲವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಜ್ಜಪ್ಪ ಇತ್ತೀಚೆಗೆ ನೀಡುತ್ತಿರುವ ಹೇಳಿಕೆಗಳು ಹಾಸ್ಯಾಸ್ಪದವಾಗಿದೆ. ಎಲ್ಲಾ ಹಿಂದುಳಿದ ವರ್ಗದ ಮುಖಂಡರ ಬೆಂಬಲದೊಂದಿಗೆ ಬಂದಿರುವ ಚೌಡಯ್ಯ ಅವರ ಸೇವೆಯನ್ನು ಕಡೆಗಣಿಸಿ ಯಾರಿಗೂ ಸಹಾಯ ಮಾಡಿಲ್ಲ ಎನ್ನುವುದು ಸತ್ಯಕ್ಕೆ ದೂರವಾದುದು ಎಂದರು.

ಅಜ್ಜಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಯತ್ನಗಳು ನಡೆದಾಗ ನಾವು ಸ್ವತಃ ಮುಂದೆ ಬಂದು ಅವರನ್ನು ಗಡಿಪಾರು ಆಗದಂತೆ ತಡೆದಿದ್ದೇವೆ. ಅದೇ ಅಜ್ಜಪ್ಪ ನಂತರ ಬಿಳಿಚೌಡಯ್ಯ ಅವರ ಬಳಿ ಬಂದು ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕಾಗಿ ಕೈಮುಗಿದು ಮನವಿ ಮಾಡಿರುವುದು ಎಲ್ಲರಿಗೂ ತಿಳಿದ ಸಂಗತಿ ಎಂದು ಸ್ಮರಿಸಿದರು.

ಶಾಸಕರು ಹಾಗು ಹಿಂದುಳಿದ ವರ್ಗದ ಮುಖಂಡರ ಜೊತೆ ಚರ್ಚಿಸಿ ಅಜ್ಜಪ್ಪರನ್ನು ಬೆಳೆಸಬೇಕೆಂಬ ನಿಟ್ಟಿನಲ್ಲಿ ಅವಕಾಶ ನೀಡಲಾಯಿತು. ಈಗ ಅದೇ ವ್ಯಕ್ತಿ ಏಕವಚನದಲ್ಲಿ ವೈಯಕ್ತಿಕವಾಗಿ ನಿಂದಿಸುವುದು ರಾಜಕೀಯ ಸಂಸ್ಕೃತಿಗೆ ವಿರುದ್ಧ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಜ್ಜಪ್ಪ ಅವರ ರಾಜಕೀಯ ನಿಲುವುಗಳ ಬಗ್ಗೆ ಮಾತನಾಡಿದ ಅವರು, ಜೆಡಿಎಸ್‌ನಲ್ಲಿದ್ದಾಗಲೂ, ಕಾಂಗ್ರೆಸ್‌ನಲ್ಲಿ ಶಾಸಕರ ಸಮೀಪದಲ್ಲಿದ್ದಾಗಲೂ ಅವರು ಯಾರ ಬಗ್ಗೆ ಹೇಗೆ ಮಾತನಾಡಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯ. ಇಂತಹ ವ್ಯಕ್ತಿಯಿಂದ ಇಂದಿನ ಆರೋಪಗಳು ಹೊರಬರುತ್ತಿರುವುದು ಆಶ್ಚರ್ಯದ ಸಂಗತಿ ಎಂದರು.

ರಾಜಕೀಯ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ವೈಯಕ್ತಿಕ ನಿಂದನೆ, ಅವಹೇಳನ ಸಹಿಸುವುದಿಲ್ಲ. ಅಭಿವೃದ್ಧಿ ವಿಷಯಗಳಲ್ಲಿ ಚರ್ಚೆ ಮಾಡಲಿ ರಸ್ತೆ, ಚರಂಡಿ, ಮೂಲ ಸೌಕರ್ಯಗಳ ಬಗ್ಗೆ ಪ್ರಶ್ನಿಸಲಿ. ಆದರೆ ವ್ಯಕ್ತಿಗತ ದಾಳಿಗಳನ್ನು ಮುಂದುವರೆಸಿದರೆ ತಕ್ಕ ಪ್ರತ್ಯುತ್ತರ ನೀಡಬೇಕಾಗುತ್ತದೆಂದು ಎಚ್ಚರಿಸಿದರು.

ಕಾಂಗ್ರೆಸ್ ಮುಖಂಡರಾದ ನಾಗರಾಜ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಅಜ್ಜಪ್ಪ, ಮುಖಂಡರಾದ ರಾಜು ಮತ್ತು ಮೋಕ್ಷರಾಜು ಇತರರಿದ್ದರು.

ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್: ಡಿಎಂಕೆ ಕಿಡಿ.. ಕಿಡಿ

ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಚಿತ್ರ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷವನ್ನು ಕಾಂಗ್ರೆಸ್ ಬೆಂಬಲಿಸಲು ಮುಂದಾಗಿರುವ ಬೆನ್ನಲ್ಲೇ, ಕಾಂಗ್ರೆಸ್, ಡಿಎಂಕೆಯ ಬೆನ್ನಿಗೆ ಇರಿದಿದೆ ಎಂದು ಡಿ.ಎಂ.ಕೆ. ಪಕ್ಷವು ಗಂಭೀರ ಆರೋಪ ಮಾಡಿದೆ

ಮಂಗಳವಾರ ರಾತ್ರಿ ನಡೆದ ವರ್ಚುವಲ್ ಸಭೆಯಲ್ಲಿ ಕಾಂಗ್ರೆಸ್ ಪಕ್ಷ, ಟಿವಿಕೆಗೆ ಸರ್ಕಾರ ರಚಿಸಲು ಷರತ್ತುಬದ್ಧ ಬೆಂಬಲ ನೀಡಲು ನಿರ್ಣಯ ಅಂಗೀಕರಿಸಿದೆ. ಜೊತೆಗೆ ಕೆಲವು ಮಂಡಳಿಗಳಲ್ಲಿ ಕ್ಯಾಬಿನೆಟ್ ಹುದ್ದೆಗಳು ಮತ್ತು ಅಧ್ಯಕ್ಷ ಸ್ಥಾನಗಳಿಗೆ ಬೇಡಿಕೆ ಇಟ್ಟಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಡಿಎಂಕೆ ವಕ್ತಾರ ಸರವಣನ್ ಅಣ್ಣಾದೊರೈ, ತಮಿಳುನಾಡಿನಲ್ಲಿ ಕಾಂಗ್ರೆಸ್ ನಾಯಕರು ವಿಜಯ್ ಅವರ ಟಿವಿಕೆ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಮುಂದಾಗುವ ಮೂಲಕ ಡಿಎಂಕೆಯ

ಸೋತರೂ ರಾಜೀನಾಮೆ ನೀಡಲು ಮಮತಾ ನಕಾರ

ಒದ್ದು ಹೊರ ಹಾಕಿ: ವಕೀಲ ಜೇಠ್ಮಲಾನಿ

• ಪ್ರಜೋದಯ ವರದಿ

ಪಶ್ಚಿಮ ಬಂಗಾಳ: ಚುನಾವಣಾ ಫಲಿತಾಂಶಗಳ ನಂತರ ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿ ತೀವ್ರ ಸ್ವರೂಪ ಪಡೆದುಕೊಂಡಿದೆ. ಮಮತಾ ಬ್ಯಾನರ್ಜಿ ಅವರು ತಮ್ಮ ಪಕ್ಷ ಸೋಲು ಕಂಡಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಘೋಷಿಸಿರುವುದು ದೊಡ್ಡ ವಿವಾದಕ್ಕೆ ತಲೆದೋರಿದ್ದು, ಜನಾದೇಶವನ್ನು ತಳ್ಳಿಹಾಕಿದಂತೆ ಮಮತಾ ಬ್ಯಾರ್ಜಿಯವರು ವಿಚಿತ್ರ ಹೇಳಿಕೆ ನೀಡುತ್ತಿದ್ದು, ರಾಜಕೀಯ ಪಕ್ಷಗಳ ಆಕ್ರೋಶ ಕಾರಣವಾಗಿದೆ.

ಈ ಬೆಳವಣಿಗೆಗೆ ಪ್ರತಿಕ್ರಿಯಿಸಿದ ಹಿರಿಯ ವಕೀಲ ಮತ್ತು ರಾಜಕೀಯ ವಿಶ್ಲೇಷಕ ಮಹೇಶ್ ಜೇಠ್ಮಲಾನಿ ಅವರು, ಮಮತಾ ರಾಜೀನಾಮೆಗೆ ನಿರಾಕರಿಸಿದರೆ ಅವರನ್ನು ಕೂಡಲೇ ಒದ್ದು ಹೊರಹಾಕಿ ಎಂದು ತೀವ್ರವಾಗಿ ಕಿಡಿಕಾರಿದ್ದಾರೆ.

ಈ ವಿಚಾರದಲ್ಲಿ ಗವರ್ನರ್ ಹಸ್ತಕ್ಷೇಪ ಅಗತ್ಯವಿದೆ. ಜನರು ನೀಡಿದ ತೀರ್ಪನ್ನು ಒಪ್ಪಿಕೊಳ್ಳದೇ ಅಧಿಕಾರದಲ್ಲೇ ಮುಂದುವರಿಯಲು ಪ್ರಯತ್ನಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಪಕ್ಷವು ಈ ಬಾರಿ ನಿರೀಕ್ಷಿತ ಫಲಿತಾಂಶವನ್ನು ಪಡೆಯಲು ವಿಫಲವಾಗಿದ್ದು, ಭಾರತೀಯ ಜನತಾ ಪಕ್ಷದ ಭಾರೀ ಮುನ್ನಡೆ ಸಾಧಿಸಿ ಸರ್ಕಾರ ರಚನೆಗೆ ಸಜ್ಜಾಗಿದೆ. ಆದರೆ, ಮಮತಾ ಬ್ಯಾನರ್ಜಿ ಅವರು ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ''ನಾನು ರಾಜೀನಾಮೆ ನೀಡುವುದಿಲ್ಲ'' ಎಂದು ಸ್ಪಷ್ಟಪಡಿಸಿದ್ದಾರೆ.

ತಮ್ಮ ನಿಲುವನ್ನು ''ನೈತಿಕ ಜಯ'' ಎಂದು ಸಮರ್ಥಿಸಿಕೊಂಡಿದ್ದಾರೆ. ಆದರೆ, ವಿರೋಧ ಪಕ್ಷಗಳು ಇದನ್ನು ಜನರ ತೀರ್ಪಿಗೆ ಮಾಡಿರುವ ಅವಮಾನ ಎಂದು ಹೇಳುತ್ತಿವೆ.

ಭಾರತದ ಸಂವಿಧಾನ ಪ್ರಕಾರ, ಮುಖ್ಯಮಂತ್ರಿಗೆ ಸ್ಪಷ್ಟ ಬಹುಮತ ಇಲ್ಲದಿದ್ದರೆ ಅವರು ಪದವಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿಯೇ ರಾಜ್ಯಪಾಲರು ಮಧ್ಯಪ್ರವೇಶಿಸಿ ಬಹುಮತ ಸಾಬೀತುಪಡಿಸಲು ಸೂಚಿಸಬಹುದು ಅಥವಾ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಬಹುದು.

ಈಗ ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಮುಂದಿನ ಹಂತ ಏನು ಎನ್ನುವುದು ರಾಜ್ಯಪಾಲರ ನಿರ್ಧಾರ ಮತ್ತು ಸಂವಿಧಾನಾತ್ಮಕ ಪ್ರಕ್ರಿಯೆಗಳ ಮೇಲೆ ಅವಲಂಬಿತವಾಗಿದೆ.

ಸೋಂಪುರದಲ್ಲಿ ಸಿರಿ ಸಿಂಗಾರ ಕೋಲ ಮಹೋತ್ಸವ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ಸೋಂಪುರ ಗ್ರಾಮದಲ್ಲಿ ಶ್ರೀ ಮಂತ್ರದೇವತೆ ದೈವದ ವಾರ್ಷಿಕ ಸಿರಿ ಸಿಂಗಾರ ಕೋಲ ಮಹೋತ್ಸವ ಭಕ್ತಿಭಾವದಿಂದ ಮತ್ತು ವೈಭವದಿಂದ ಯಶಸ್ವಿಯಾಗಿ ನೆರವೇರಿತು. ಗ್ರಾಮದಲ್ಲಿ ಬೆಳಿಗ್ಗೆಯಿಂದಲೇ ಧಾರ್ಮಿಕ ವಾತಾವರಣ ನಿರ್ಮಾಣವಾಗಿದ್ದು, ವಿಶೇಷ ಪೂಜಾ ಕಾರ್ಯಗಳು, ಅಲಂಕಾರಗಳು ಹಾಗೂ ಸಂಪ್ರದಾಯಬದ್ಧ ವಿಧಿ-ವಿಧಾನಗಳ ಮೂಲಕ ದೈವ ಆರಾಧನೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಸೋಂಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪೂಜೆ ಸಲ್ಲಿಸಿದರು. ಮಹೋತ್ಸವದ ಮುಖ್ಯ ಆಕರ್ಷಣೆಯಾಗಿ ಸಿರಿ ಸಿಂಗಾರ ಕೋಲ ನಡೆಯಿತು. ದೈವವನ್ನು ಸಿಂಗಾರಿಸಿ ಭಕ್ತರಿಗೆ ದರ್ಶನ ನೀಡಲಾಗಿದ್ದು, ಈ ಸಂದರ್ಭ ಭಕ್ತರು ಭಕ್ತಿಭಾವದಿಂದ ನಮಸ್ಕರಿಸಿ ಆಶೀರ್ವಾದ ಪಡೆದರು.

ಕಾರ್ಯಕ್ರಮದ ಅಂಗವಾಗಿ ಸಿರಿಮುಡಿ, ಗಂಧ ಪ್ರಸಾದ ವಿತರಣೆ ನಡೆಯಿತು. ಮಹಿಳೆಯರು, ಹಿರಿಯರು ಹಾಗೂ ಯುವಕರು ಉತ್ಸಾಹದಿಂದ ಪಾಲ್ಗೊಂಡು ಧಾರ್ಮಿಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ತಂದರು. ಗ್ರಾಮದಲ್ಲಿ ಹಬ್ಬದ ಸಂಭ್ರಮ ಮನೆಮಾಡಿದ್ದು, ಎಲ್ಲೆಡೆ ಭಕ್ತಿಯೂ, ಸಂಪ್ರದಾಯದ ಸೊಬಗು ಕಂಡುಬಂತು.

ಈ ಮಹೋತ್ಸವವನ್ನು ಗಣೇಶ ಪೂಜಾರಿ, ವಿಶಾಲ ಹಾಗೂ ಕುಟುಂಬಸ್ಥರು ಭಕ್ತಿಭಾವದಿಂದ ಆಯೋಜಿಸಿದ್ದು, ಕಾರ್ಯಕ್ರಮದ ಯಶಸ್ಸಿಗೆ ಗ್ರಾಮಸ್ಥರ ಸಹಕಾರ ಪ್ರಮುಖವಾಗಿತ್ತು. ಕಾರ್ಯಕ್ರಮದಲ್ಲಿ ಶಿಸ್ತಿನಿಂದ ವ್ಯವಸ್ಥೆ ಮಾಡಲಾಗಿದ್ದು, ಯಾವುದೇ ಅಡಚಣೆ ಇಲ್ಲದೆ ಸುಸೂತ್ರವಾಗಿ ನೆರವೇರಿತು.

ಕಾರ್ಯಕ್ರಮ ಯಶಸ್ವಿಗೆ ಕೈಜೋಡಿಸಿದ ಎಲ್ಲಾ ಭಕ್ತರಿಗೆ ಮತ್ತು ಸಹಕರಿಸಿದವರಿಗೆ ಆಯೋಜಕರು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

ಹಾಸನ: ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ.ವಿ.ವಿ ಕೇಂದ್ರ, ಹಳ್ಳಿಮೈಸೂರು ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ.08 ರಂದು ಬೆಳ್ಳಗೆ 10 ರಿಂದ ಸಂಜೆ 5 ಗಂಟೆಯವರೆಗೆ ಹಳ್ಳಿಮೈಸೂರು ಶಾಖೆಯ ಗ್ರಾಮಗಳಾದ ಹಳ್ಳಿ ಮೈಸೂರು, ತಾತನಹಳ್ಳಿ, ಕಲ್ಲಳ್ಳಿ, ತೇಜೂರು, ಗುಡ್ಡೇನಹಳ್ಳಿ, ಹಾಡ್ಯ, ದೇವರಗುಡ್ಡೆನಹಳ್ಳಿ, ಮಂಗಳವಾಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಹೊಳೆನರಸೀಪುರ ನೋಡಲ್ ಕೇಂದ್ರ, ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃತ್ತಿ ಕೌಶಲ್ಯ, ಎ.ಐ.ನಿಂದ ಕೆಲಸ ಪಡೆಯಲು ಸಹಕಾರಿ

ಯಾವುದೇ ಉದ್ಯಮ ಆರಂಭಕ್ಕೂ ಮುನ್ನ ಯೋಜನೆ ಅತ್ಯಂತ ಮುಖ್ಯ: ಡಾ.ರಾಜಶೇಖರ್

• ಪ್ರಜೋದಯ ವರದಿ

ಹಾಸನ: ವಿದ್ಯಾರ್ಥಿಗಳು ವೃತ್ತಿ ಕೌಶಲ್ಯ ಹಾಗೂ ಎ.ಐ. ಬಗೆಗೆ ತಿಳಿದುಕೊಂಡರೆ ವಿದ್ಯಾಭ್ಯಾಸದ ನಂತರ ಕೆಲಸ ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎಂದು ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ರಾಜಶೇಖರ್ ಅವರು ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿರ್ವಹಣಾಶಾಸ್ತ್ರ ವಿಭಾಗದ ವತಿಯಿಂದ ಬುಧವಾರ ಬಿ.ಬಿ.ಎ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದಿನ ಜಾಗತೀಕ ಯುಗದಲ್ಲಿ ಕೇವಲ ಪಠ್ಯ ಜ್ಞಾನ ಸಾಲದು, ಪ್ರಾಯೋಗಿಕ ಕೌಶಲ್ಯಗಳು ಉತ್ತಮ ಸಂವಾಹನ ಮತ್ತು ನಿರ್ಧಾರ ಸಾಮರ್ಥ್ಯ ಅಗತ್ಯ. ವ್ಯವಹಾರಿಕ ಕ್ಷೇತ್ರದಲ್ಲಿ ಬಿಬಿಎ ವಿದ್ಯಾರ್ಥಿಗಳು ಹೆಚ್ಚಾಗಿ ತೊಡಗಿಕೊಳ್ಳುವುದರಿಂದ ಯಾವುದೇ ಉದ್ಯಮವನ್ನು ಆರಂಭಿಸುವ ಮೊದಲು ಸರಿಯಾದ ಯೋಜನೆ ಮಾಡುವುದು, ಅತ್ಯಂತ ಮುಖ್ಯ. ಎಂ.ಬಿ.ಎ. ವ್ಯವಹಾರ ನಿರ್ವಹಣೆಯಲ್ಲಿನ ಉನ್ನತ ಶಿಕ್ಷಣವಾಗಿದ್ದು, ವಿದ್ಯಾರ್ಥಿಗಳಿಗೆ ನಿರ್ವಹಣಾ ಕೌಶಲ್ಯಗಳು ಮತ್ತು ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಹಾಯ ಮಾಡುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಜೀವ್ ಸಂಸ್ಥೆಯ ಶೋಭ ಮಾತನಾಡಿ, ಹೆಣ್ಣು ಮಕ್ಕಳು ಯಾರ ಮೇಲು ಅವಲಂಬಿತರಾಗದೆ ತಮ್ಮ ಜೀವನವನ್ನು ತಾವೇ ನಿರ್ಮಿಸಿಕೊಳ್ಳಬೇಕು. ಶಿಕ್ಷಣ ಮತ್ತು ಆತ್ಮವಿಶ್ವಾಸದ ಮೂಲಕ ಅವರು ತಮ್ಮ ಗುರಿಗಳನ್ನು ಸಾಧಿಸಬಹುದು. ವೃತ್ತಿ ಕೌಶಲ್ಯಗಳು ವಿದ್ಯಾರ್ಥಿಗಳಲ್ಲಿ ಸ್ಪಷ್ಟವಾಗಿ ಆಲೋಚನೆಗಳನ್ನು ವ್ಯಕ್ತಪಡಿಸಲು ಸಹಕಾರಿ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಕೌಶಲ್ಯಗಳನ್ನು ಬೆಳೆಸಿಕೊಂಡು, ಹೊಸ ತಂತ್ರಜ್ಞಾನಗಳನ್ನು ಕಲಿತು ಸವಾಲುಗಳನ್ನು ಎದುರಿಸಲು ಸಿದ್ದರಾಗಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಅಧ್ಯಕ್ಷತೆ ವಹಿಸಿದ್ದರು, ನಿರ್ವಹಣಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ. ಸ್ವಪ್ನ ಜಿ.ಆರ್., ತಬ್ರೆಜ್, ಯೋಗೇಶ್, ಅತಿಥ್ ಹಾಗೂ ಇತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅಭಿನಂದನೆ

• ಪ್ರಜೋದಯ ವರದಿ

ಅರೇಹಳ್ಳಿ: ಇಲ್ಲಿನ ಹಿರಾ ಪಬ್ಲಿಕ್ ಶಾಲಾ ಆಡಳಿತ ಮಂಡಳಿ ವತಿಯಿಂದ 2026ರ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣರಾದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಿರಾ ಕೇಂದ್ರದಲ್ಲಿ ಬುಧವಾರ ಆಯೋಜಿಸಲಾಗಿತ್ತು.

ತಾಲ್ಲೂಕಿಗೆ ಆರನೇ ಹಾಗೂ ಅರೇಹಳ್ಳಿ ಹೋಬಳಿಗೆ ಮೊದಲ ಸ್ಥಾನ ಪಡೆದ ಫಿಜಾ ಲುಕ್ಮಾನ್ (ಮೊಹಮ್ಮದ್ ಲುಕ್ಮಾನ್ ಅವರ ಪುತ್ರಿ) ಅವರನ್ನು ಗೌರವಿಸಲಾಯಿತು. 100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳು ಹಾಗು ಶಿಕ್ಷಕರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಶಾಲೆಯ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ಪೋಷಕರು ಹಾಗೂವಿದ್ಯಾರ್ಥಿಗಳು ಹಾಜರಿದ್ದರು.

ತರ್ಕ–ಕೌತುಕವೇ ಪತ್ತೆದಾರಿ ಸಾಹಿತ್ಯದ ಪ್ರಮುಖ ಜೀವಾಳ

'ಕನ್ನಂಬಾಡಿ ಜೋಡಿ ಕೊಲೆಯ ರಹಸ್ಯ' ಪತ್ತೆದಾರಿ ಕಾದಂಬರಿ ಲೋಕಾರ್ಪಣೆ

• ಪ್ರಜೋದಯ ವರದಿ

ಹಾಸನ: ತರ್ಕಬದ್ಧ ಆಲೋಚನೆ ಮತ್ತು ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸುವ ಕೌತುಕಗಳು ಪತ್ತೆದಾರಿ ಸಾಹಿತ್ಯದ ಜೀವಾಳವಾಗಿವೆ ಎಂದು ಲೇಖಕ ಗೊರೂರು ಶಿವೇಶ್ ಅವರು ಅಭಿಪ್ರಾಯಪಟ್ಟರು.

ನಗರದ ಸ್ವಪ್ನ ಬುಕ್ ಹೌಸ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಲೇಖಕ ದೊಡ್ಡಮನೆ ಆನಂದ್ ಅವರ 'ಕನ್ನಂಬಾಡಿ ಜೋಡಿ ಕೊಲೆಯ ರಹಸ್ಯ' ಎಂಬ ಪತ್ತೇದಾರಿ ಕಾದಂಬರಿಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಆಂಗ್ಲ ಸಾಹಿತ್ಯದ ದಿಗ್ಗಜರಾದ ಸರ್ ಆರ್ಥರ್ ಕಾನನ್ ಡಯಾಲ್ ಮತ್ತು ಅಗಾಥಾ ಕ್ರಿಸ್ಟಿ ಅವರ ಪ್ರಭಾವದಿಂದ ಪ್ರೇರಿತವಾದ ಕನ್ನಡ ಪತ್ತೇದಾರಿ ಸಾಹಿತ್ಯ ಲೋಕವು, ಎನ್. ನರಸಿಂಹಯ್ಯ ಮತ್ತು ಟಿ.ಕೆ. ರಾಮರಾವ್ ಅಂತಹ ಮಹಾನ್ ಲೇಖಕರಿಂದಾಗಿ ಅಪಾರ ಓದುಗ ವಲಯವನ್ನು ಸೃಷ್ಟಿಸಿಕೊಂಡಿದೆ. ಆ ಪರಂಪರೆಯನ್ನು ದೊಡ್ಡಮನೆ ಆನಂದ್ ಅವರು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ. ಈ ಕೃತಿಯು ಓದುಗನನ್ನು ಕೊನೆಯವರೆಗೂ ಕಥೆಯ ಓಘದಲ್ಲಿ ಹಿಡಿದಿಟ್ಟುಕೊಳ್ಳುತ್ತಾ, ಅನಿರೀಕ್ಷಿತ ತಿರುವುಗಳ ಮೂಲಕ ಊಹೆಗೂ ನಿಲುಕದಂತೆ ಅಪರಾಧಿಯನ್ನು ಅನಾವರಣಗೊಳಿಸುತ್ತದೆ. ಇದು ಎಲ್ಲಾ ರೀತಿಯ ಸಿನಿಮೀಯ ತಂತ್ರಗಳನ್ನು ಒಳಗೊಂಡಿರುವುದು ವಿಶೇಷ ಎಂದು ಗೊರೂರು ಶಿವೇಶ್ ವಿವರಿಸಿದರು.

ಜಾನಪದ ವಿದ್ವಾಂಸರಾದ ಮೇಟಿಕೆರೆ ಹಿರಿಯಣ್ಣ ಅವರು ದೊಡ್ಡಮನೆ ಆನಂದ್ ಅವರ ಸಮಗ್ರ ಸಾಹಿತ್ಯ ಕೃಷಿಯನ್ನು ಪರಿಚಯಿಸಿದರು. ವೃತ್ತಿಯಲ್ಲಿ ಉತ್ತಮ ಕೃಷಿಕರಾಗಿದ್ದು, ವಕೀಲರು ಮತ್ತು ಸಿನಿಮಾ ರಂಗದಲ್ಲಿ ಆಸಕ್ತಿ ಹೊಂದಿರುವ ಆನಂದ್ ಅವರು ಬಹುಶ್ರುತ ಪ್ರತಿಭೆ. ಇವರ 'ಮಿನುಗುತಾರೆ' ಕೃತಿಯು ಸಿನಿಮಾ ರಂಗದ ವಿವಿಧ ಮಗ್ಗುಲುಗಳನ್ನು ಪರಿಚಯಿಸಿದರೆ, 'ಆನೆ ನಡೆದಿದ್ದೇ ದಾರಿ' ಕೃತಿಯು ಮಾನವ ಮತ್ತು ವನ್ಯಮೃಗಗಳ ನಡುವಿನ ಸಂಘರ್ಷವನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಎವಿಕೆ ಕಾಲೇಜಿನ ಪ್ರಾಂಶುಪಾಲ ಯತೀಶ್ವರ್ ಮಾತನಾಡಿ, ಡಿಜಿಟಲ್ ಯುಗದಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಪಠ್ಯದ ಓದಿನ ಜೊತೆಗೆ ಸಾಹಿತ್ಯದ ಓದು ವ್ಯಕ್ತಿತ್ವದ ಬೆಳವಣಿಗೆಗೆ ಪೂರಕ ಎಂದು ತಿಳಿಸಿದರು.

ವೇದಿಕೆಯಲ್ಲಿ ಲೇಖಕ ದೊಡ್ಡಮನೆ ಆನಂದ್, ಹಿರಿಯ ಲೇಖಕ ತಿರುಪತಿಹಳ್ಳಿ ಶಿವಶಂಕರಪ್ಪ, ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶಮೂರ್ತಿ, ಸ್ವಪ್ನ ಬುಕ್ ಹೌಸ್‌ನ ಮ್ಯಾನೇಜರ್ ಶಾಂತಲಾ ಹಾಗೂ ಕನ್ನಡ ಪ್ರಾಧ್ಯಾಪಕರಾದ ಮಹಾಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಪ್ರಗತಿ ಪರಿಶೀಲನಾ ಸಭೆ

• ಪ್ರಜೋದಯ ವರದಿ

ಹಾಸನ: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷರಾದ ರಾಮಪ್ಪ ಎಂ ಅವರ ಅಧ್ಯಕ್ಷತೆಯಲ್ಲಿ ಮೇ 8 ರಂದು ಬೆಳಗ್ಗೆ 10.30ಕ್ಕೆ ಹಾಸನ ಜಿಲ್ಲಾ ಪಂಚಾಯಿತಿ ಕಚೇರಿ ಹೊಯ್ಸಳ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಹಾಗೂ ಅಂದು ಮಧ್ಯಾಹ್ನ 3 ಗಂಟೆಗೆ ಚನ್ನರಾಯಪಟ್ಟಣ ತಾಲ್ಲೂಕು, ಬಾಗೂರು ಹೋಬಳಿ, ನವಿಲೆ ಭೋವಿ ಕಾಲೋನಿ ಗ್ರಾಮದಲ್ಲಿ ಸಮುದಾಯದ ಸ್ಥಳೀಯ ಮುಖಂಡರು/ಫಲಾನುಭವಿಗಳೊಂದಿಗೆ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೈಗಾರಿಕೆ ಉತ್ತೇಜಿಸಲು ಜಿಲ್ಲೆಗೆ ಎರಿನ್ ಫೌಂಡೇಶನ್

• ಪ್ರಜೋದಯ ವರದಿ

ಹಾಸನ: ಕೈಗಾರಿಕಾ ಪ್ರದೇಶಗಳಲ್ಲಿ ಪ್ರಮುಖ ಯೋಜನೆಗಳನ್ನು ಗುರುತಿ, ಅವುಗಳನ್ನು ಉತ್ತೇಜಿಸಲು ಕಾರ್ಯಾಗಾರ ಮತ್ತು ವಿಚಾರಗೋಷ್ಠಿ ಆಯೋಜಿಸುವ ಉದ್ದೇಶದಿಂದ ಎರಿನ್ ಫೌಂಡೇಶನ್ ಮೂರು ದಶಕಗಳ ನಂತರ ಪುನಃ ಹಾಸನಕ್ಕೆ ಮರಳುತ್ತಿದೆ ಎಂದು ಫೌಂಡೇಶನ್ ಅಧ್ಯಕ್ಷ ಮತ್ತು ಟ್ರಸ್ಟಿ ಸಾಯಿ ಪ್ರಕಾಶ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990ರ ದಶಕದ ಮಧ್ಯ ಭಾಗದಲ್ಲಿ ಹಾಸನ ಬೆಳವಣಿಗೆ ಕೇಂದ್ರ, ಯೋಜನೆಯನ್ನು ಉತ್ತೇಜಿಸಲು ಕಾರ್ಯಾಗಾರ ಮತ್ತು ವಿಚಾರಗೋಷ್ಠಿಗಳನ್ನು ಆಯೋಜಿಸಿತ್ತು. ಈ ಕಾರ್ಯಕ್ರಮಗಳಿಗೆ ಕೆಎಸ್ಎಫ್‌ಸಿ, ಕೆ.ಐ.ಎ.ಡಿ.ಬಿ. ಸಂಸ್ಥೆಗಳು ಪ್ರಾಯೋಜಕತ್ವ ನೀಡಿದ್ದವು. ವಿಮಾನ ನಿಲ್ದಾಣ ಸೇರಿ ಆಗಿನ ಪ್ರಸ್ತಾಪಗಳು ಈಗ ಸಾಕಾರಗೊಂಡಿವೆ.

ಈ ವರ್ಷದ ಆಗಸ್ಟ್ ಮೊದಲ ವಾರದಲ್ಲಿ ಪ್ರಾಥಮಿಕ ಕೈಗಾರಿಕಾ ಮತ್ತು ಸಿಎಸ್‌ಆರ್ ಸಂವಾದವನ್ನು ಹಾಗು ಸೆಪ್ಟೆಂಬರ್‌ನಲ್ಲಿ ಬೃಹತ್ ವಿಚಾರಗೋಷ್ಠಿ ಆಯೋಜಿಸಲು ಉದ್ದೇಶಿಸಲಾಗಿದೆ. ಮುಂದುವರಿದು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸುವುದು, ಸೈನ್ಸ್‌ಫೆಸ್ಟ್, ಪ್ರಯೋಗಾಲಯ ಅಭಿವೃದ್ಧಿ ಎಲೆಕ್ಟ್ರಿಕ್ ವಾಹನ ತಂತ್ರಜ್ಞಾನದಲ್ಲಿ ಕೌಶಲ್ಯಾಭಿವೃದ್ಧಿ ಒಳಗೊಳ್ಳುವ ಚೆಸ್, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಗುರಿ ತಲುಪುವಿಕೆ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳಲಾಗುವುದು. ಮಹಿಳಾ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನೂ ಆಯೋಸಲಾಗುವುದು. ಜೊತೆಗೆ ಶಾಲಾ ಶಿಕ್ಷಣ ಮತ್ತು ಇತರೆ ಆಯ್ದ ಕ್ಷೇತ್ರಗಳಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಉಪಕ್ರಮಗೊಳಿಸುವುದು ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಅತ್ಯಗತ್ಯ

• ಪ್ರಜೋದಯ ವರದಿ

ಬೇಲೂರು: ಶ್ರೀ ಶಂಕರ ಮಠ, ತಾಲೂಕು ಬ್ರಾಹ್ಮಣ ಮಹಾಸಭಾ ಹಾಗೂ ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ 'ನಮನ' ಯೋಜನೆಯಡಿ ಸಂವೇದನಾ ಶೀಲತಾ ಪುನಶ್ಚೇತನ ನಮನ ಕಾರ್ಯಾಗಾರವನ್ನು ಶೃಂಗೇರಿ ಮಠದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ತಾಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಹಾಗೂ ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ಸಿ.ಆರ್.ವಿಜಯ್ ಕೇಶವ್ ಮಾತನಾಡಿ, ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ 'ನಮನ' ಯೋಜನೆಯಡಿ ಆಯೋಜಿಸಿರುವ ಮಾನಸಿಕ ಒತ್ತಡ ನಿರ್ವಹಣಾ ಶಿಬಿರವು ಶ್ಲಾಘನೀಯ ಹೆಜ್ಜೆಯಾಗಿದ್ದು, ಇಂದಿನ ವೇಗದ ಜೀವನಶೈಲಿಯಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಅತ್ಯಗತ್ಯವಾಗಿದೆ. ನಿಮ್ಹಾನ್ಸ್ ಆಸ್ಪತ್ರೆಯು ವಿವಿಧ ಎನ್‌ಜಿಓಗಳು ಮತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಸಹಯೋಗದೊಂದಿಗೆ ಆತ್ಮಹತ್ಯೆ ತಡೆಗಟ್ಟುವಿಕೆ, ಮಾಧ್ಯಮ ಜವಾಬ್ದಾರಿ ಮತ್ತು ನರರೋಗ ತಪಾಸಣಾ ಕಾರ್ಯಾಗಾರಗಳನ್ನು ನಡೆಸುತ್ತಿದ್ದು ಜನರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಪಟ್ಟಣ ಸರ್ಕಾರಿ ಆಸ್ಪತ್ರೆಯ ವೈದ್ಯ ರಾಜೀವ್ ಮಾತನಾಡಿ, ದೇಹಕ್ಕೆ ಕಾಯಿಲೆ ಉಂಟಾದರೆ ತಕ್ಷಣ ಚಿಕಿತ್ಸೆ ಕೊಡಿಸುತ್ತೇವೆ. ಆದರೆ ಮಾನಸಿಕ ಆರೋಗ್ಯ ಹದಗೆಟ್ಟಾಗ ಅದನ್ನು ಕಡೆಗಣಿಸುತ್ತೇವೆ. ಮಾನಸಿಕ ವೈದ್ಯರ ಬಳಿ ಹೋದರೆ ಬೇರೆಯವರು ಏನು ತಿಳಿಯುತ್ತಾರೋ ಎಂಬ ಮುಜುಗರ ಬಹಳ ಮಂದಿಯಲ್ಲಿ ಇದೆ. ಒಬ್ಬ ವ್ಯಕ್ತಿ ಮಾನಸಿಕ ಸ್ಥಿಮಿತ ಕಳೆದುಕೊಂಡರೆ ಅದು ಕುಟುಂಬಕ್ಕೆ ಸಮಾಜಕ್ಕೆ ದೇಶಕ್ಕೂ ಕೆಡುಕು ಉಂಟಾಗುವ ಸಂಭವ ಇದೆ. ಶಿಕ್ಷಣ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಸ್ಪರ್ಧೆ ಹೆಚ್ಚಾಗುತ್ತಿದ್ದು, ಶಿಕ್ಷಕರು ಹಾಗೂ ಮಕ್ಕಳ ಮೇಲೆ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಇದು ನಿಲ್ಲಬೇಕು ಎಂದು ಅವರು ಅಭಿಪ್ರಾಯಿಸಿದರು.

ನಿಮ್ಹಾನ್ಸ್ ಆಸ್ಪತ್ರೆಯ ಸಂಪನ್ಮೂಲ ವ್ಯಕ್ತಿ ಡಾ.ಶ್ರಾವಂತಿ ಮಾತನಾಡಿ, ನಿತ್ಯ ಜೀವನದ ಮಾನಸಿಕ ಒತ್ತಡಗಳಿಂದ ಸಹಜವಾಗಿ ದೇಹದ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತದೆ. ಇತ್ತೀಚೆಗೆ ಜನರಲ್ಲಿ ಸಂವೇದನಾ ಶೀಲತೆ ಕಡಿಮೆಯಾಗುತ್ತಿದೆ. ಈ ಒತ್ತಡಗಳನ್ನು ಸಕಾರಾತ್ಮಕ ಚಿಂತನೆಗಳಿಂದ ಶಮನಗೊಳಿಸಿಕೊಂಡು ಹೇಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬುದನ್ನು ಈ ಕಾರ್ಯಾಗಾರವು ತಿಳಿಸಿಕೊಡುತ್ತದೆ. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ದೇವಾಲಯ ಹಾಗೂ ಮಠ ಮಾನ್ಯಗಳ ಅರ್ಚಕರಿಗೆ ಸಹಕಾರಿಯಾಗಿಯಾಗಲೆಂದು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಮಕ್ಕಳ ತಜ್ಞೆ ಜಯಲಕ್ಷ್ಮಿ, ಡಾ. ಮದನ್, ಸಾಗರ್ ಮನೋಜ್, ಬ್ರಾಹ್ಮಣ ಮಹಾಸಭಾ ಮಾಜಿ ಅಧ್ಯಕ್ಷ ಕೆ.ಆರ್. ಮಂಜುನಾಥ್, ವೇಣುಗೋಪಾಲ್, ನಾಗರಾಜ್, ರಮೇಶ ಆನಂಬಿ, ಕೇಶವ ಹತ್ವಾರ್, ಅನಂತಮೂರ್ತಿ ಸುದರ್ಶನ್ ಶ್ರೀ ವಿದ್ಯಾ ಇನ್ನಿತರರು ಹಾಜರಿದ್ದರು.

ರೈತರಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾದ ಲಾಟ್‌ಗಳ ವಿತರಿಸಲು ಜಿಲ್ಲಾ ಸಲಹಾ ಸಮಿತಿ ತೀರ್ಮಾನ

ಆಲೂಗೆಡ್ಡೆ ಬಿತ್ತನೆಗೆ ಮುಂಜಾಗ್ರತಾ ಕ್ರಮಗಳು

• ಪ್ರಜೋದಯ ವರದಿ

ಹಾಸನ: ಮುಂಗಾರಿನ ಬಿತ್ತನೆಗಾಗಿ ಆಲೂಗಡ್ಡೆ ಮಾರಾಟ ಪ್ರಕ್ರಿಯೆಯು ಸದ್ಯದಲ್ಲೇ ಪ್ರಾರಂಭವಾಗಲಿದ್ದು, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಸೋಮನಹಳ್ಳಿ ಕಾವಲು ವತಿಯಿಂದ ಬಿತ್ತನೆ ಗೆಡ್ಡೆಗಳನ್ನು ದುಂಡಾಣು ಮತ್ತು ನಂಜಾಣು ರೋಗಗಳ ಸೋಂಕಿನ ಪರೀಕ್ಷೆಗೆ ಒಳಪಡಿಸಲಾಗಿದ್ದು, ಪರೀಕ್ಷೆಯಲ್ಲಿ ತೇರ್ಗಡೆಯಾದ ಲಾಟ್‌ಗಳನ್ನು ಮಾತ್ರ ರೈತರಿಗೆ ವಿತರಿಸುವಂತೆ ಜಿಲ್ಲಾ ಸಲಹಾ ಸಮಿತಿಯ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗಿದೆ,



ರೈತರು ಗೆಡ್ಡೆಗಳನ್ನು ಖರೀದಿಸಿದ ತಕ್ಷಣ ಬಿತ್ತನೆ ಮಾಡಿದರೆ, ಗೆಡ್ಡೆಗಳು ಮೊಳಕೆ ಒಡೆಯುವುದಿಲ್ಲ ಹಾಗೂ ಹೆಚ್ಚಿನ ಮಳೆಯಾದಂತಹ ಸಂದರ್ಭದಲ್ಲಿ ಗೆಡ್ಡೆಗಳು ಕೊಳೆಯುವ ಸಾಧ್ಯತೆ ಗಳಿರುತ್ತದೆ. ಆದ್ದರಿಂದ ಗೆಡ್ಡೆಗಳನ್ನು ಖರೀದಿಸಿದ ನಂತರ ಕನಿಷ್ಠ 10-15 ದಿವಸಗಳವರೆಗಾದರೂ ನೆರಳಿನಲ್ಲಿ, ಗಾಳಿಯಾಡುವಂತಹ ಸ್ಥಳದಲ್ಲಿ ಹರಡಿ ಹದಗೊಳಿಸಬೇಕು,

ಹದಗೊಳಿಸಲು ಹರಡಿರುವ ಗೆಡ್ಡೆಗಳ ಮೇಲೆ ಬ್ಯಾವಿಸ್ಟಿನ್ ಶಿಲೀಂಧ್ರ ನಾಶಕ ಪುಡಿಯನ್ನು ಎರಚಬೇಕು, 10-15 ದಿವಸಗಳ ನಂತರ ಬಿತ್ತನೆಗೆ ಒಂದು ದಿನ ಮುಂಚಿತವಾಗಿ ದೊಡ್ಡ ಗೆಡ್ಡೆಗಳನ್ನು ಕಣ್ಣುಗಳ ಆಧಾರದ ಮೇಲೆ ಕತ್ತರಿಸಿ ಅಥವಾ ಚಿಕ್ಕ ಗೆಡ್ಡೆಗಳನ್ನು ಸಂಪೂರ್ಣವಾಗಿ ದುಂಡಾಣು ಹಾಗೂ ಶಿಲೀಂಧ್ರ ನಾಶಕಗಳ ಮಿಶ್ರಣದ ದ್ರಾವಣದಲ್ಲಿ (ಮ್ಯಾಂಕೋಜೆಬ್ 4 ಗ್ರಾಂ ಸ್ಟ್ರೆಪ್ಟೋಮೈಸಿನ್ ಸಲ್ಫೇಟ್ 0.5 ಗ್ರಾಂ ಪ್ರತಿ ಒಂದು ಲೀಟರ್) 10-15 ನಿಮಿಷ ನೆನೆಸಿ ಬೀಜೋಪಚಾರ ಮಾಡಿ, 24 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ, ನಂತರ ಬಿತ್ತನೆಗೆ ಉಪಯೋಗಿಸಬೇಕು.

ಈಗಾಗಲೇ ಜಿಲ್ಲೆಯ ಹಲವೆಡೆ ಮಳೆ ಪ್ರಾರಂಭವಾಗಿರುವಂತೆ ಗೋಚರಿಸಿದರೂ ಸಹ, ಮುಂಗಾರು ಮಳೆ ಇನ್ನು ಪ್ರಾರಂಭವಾಗಿರುವುದಿಲ್ಲ, ಕನಿಷ್ಠ 3-4 ಉತ್ತಮವಾದ ಹದವಾದ ಮಳೆಯಾದ ನಂತರವೇ ಭೂಮಿಯ ತಾಪಮಾನ ಕಡಿಮೆಯಾಗುತ್ತದೆ, ಆಗ ಆಲೂಗಡ್ಡೆ ಬಿತ್ತನೆ ಮಾಡಬೇಕು, ಒಂದೆರಡು ಮಳೆಯಾಗುವುದು ನಂತರ ಬಿಸಿಲು ಬರುವುದು ಇಂತಹ ಸಂದರ್ಭದಲ್ಲಿ ಬಿತ್ತನೆ ಮಾಡಿದರೆ ಭೂಮಿಯ ತಾಪಮಾನ ಹೆಚ್ಚಿರುವುದರಿಂದ ಗೆಡ್ಡೆಗಳು ಕೊಳೆಯುವ ಹಾಗೂ ಮೊಳಕೆ ಬರದಿರುವ ಸಾಧ್ಯತೆ ಗಳಿರುತ್ತವೆ.

ಆಲೂಗಡ್ಡೆ ಬಿತ್ತನೆ ಮಾಡಿರುವ ತಾಕುಗಳಲ್ಲಿ ಹೆಚ್ಚಿನ ಮಳೆಯಿಂದ ನೀರು ನಿಂತರೆ, ಗೆಡ್ಡೆಗಳು ಕೊಳೆಯಲು ಪ್ರಾರಂಭಿಸುತ್ತವೆ. ಆದ್ದರಿಂದ ರೈತರು, ಆಲೂಗಡ್ಡೆ ಬಿತ್ತನೆಯಾಗಿರುವ ಜಮೀನುಗಳಲ್ಲಿ ಹೆಚ್ಚುವರಿ ಮಳೆ ನೀರು ಬಸಿದು ಹೋಗುವಂತೆ ವ್ಯವಸ್ಥೆ ಕಲ್ಪಿಸಿಕೊಳ್ಳುವ ಮೂಲಕ ಆಲೂಗಡ್ಡೆ ಬಿತ್ತನೆಯಲ್ಲಿ ರೈತರು ಮುಂಜಾಗೃತಾ ಕ್ರಮಗಳನ್ನು ವಹಿಸುವಂತೆ ಜಿಲ್ಲಾ ಪಂಚಾಯತ್ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ವಿದೇಶದಿಂದ ಭಾರತಕ್ಕೆ ವಾಪಸ್ ಬಂತು 100 ಮೆಟ್ರಿಕ್ ಟನ್ ಚಿನ್ನ



ನವದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸತತ ಮೂರನೇ ಆರ್ಥಿಕ ವರ್ಷದಲ್ಲಿ 100 ಮೆಟ್ರಿಕ್ ಟನ್‌ಗಿಂತ ಹೆಚ್ಚು ಚಿನ್ನವನ್ನು ವಿದೇಶಿ ಕಮಾನುಗಳಿಂದ ಭಾರತಕ್ಕೆ ಸ್ಥಳಾಂತರಿಸಿದೆ. ಈ ಮೂಲಕ ಆರ್‌ಬಿಐ ಹ್ಯಾಟ್ರಿಕ್ ಸಾಧನೆ ಮಾಡಿದೆ.

2025-26ರ ಆರ್ಥಿಕ ವರ್ಷದಲ್ಲಿ ಆರ್‌ಬಿಐ ಸುಮಾರು 168.06 ಮೆಟ್ರಿಕ್ ಟನ್ ಚಿನ್ನವನ್ನು ಯುನೈಟೆಡ್ ಕಿಂಗ್ ಡಮ್ (ಬ್ಯಾಂಕ್ ಆಫ್ ಇಂಗ್ಲೆಂಡ್) ಮತ್ತು ಬ್ಯಾಂಕ್ ಫಾರ್ ಇಂಟರ್ ನ್ಯಾಷನಲ್ ಸೆಟಲೆಂಟ್ಸ್ ನಿಂದ ಭಾರತಕ್ಕೆ ತಂದಿತ್ತು. 2023-24 ರಲ್ಲಿ 107.21 ಮೆಟ್ರಿಕ್ ಟನ್, 2024-25 ರಲ್ಲಿ 103.68 ಮೆಟ್ರಿಕ್ ಟನ್ ಮತ್ತು 2025-26 ರಲ್ಲಿ 168.06 ಮೆಟ್ರಿಕ್ ಟನ್ ಚಿನ್ನವನ್ನು ಮರಳಿ ತರಲಾಗಿದೆ.

ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆ ಮುನ್ಸೂಚನೆ

ಮೇ 9ರ ವರೆಗೆ ಗುಡುಗು ಸಹಿತ ವರುಣಾಗಮನ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೇ 9ರ ವರೆಗೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ವಿಶೇಷವಾಗಿ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಗಾಳಿಯ ವೇಗ ಹೆಚ್ಚಿರಲಿದ್ದು, ಹೈ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಬಂಗಾಳಕೊಲ್ಲಿ ಮತ್ತು ಹಿಂದೂ ಮಹಾಸಾಗರದಲ್ಲಿ ವಾಯುಭಾರ ಕುಸಿತದ ಲಕ್ಷಣಗಳು ಕಂಡು ಬಂದಿವೆ. ಇದು ಮುಂಗಾರು ಮಳೆಯ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರಬಹುದು.

ಚಾಮರಾಜನಗರ, ಮೈಸೂರು ಮತ್ತು ಕೊಡಗು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಈ ವೇಳೆ ಗಂಟೆಗೆ 40-50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸಲಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾಸನ, ಚಿಕ್ಕಮಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಇಲ್ಲಿಯೂ ಸಹ 40-50 ಕಿ.ಮೀ ವೇಗದ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಪ್ರದೇಶಗಳಲ್ಲಿ ಸಣ್ಣ ವ್ಯಾಪ್ತಿಯ ತುಂತುರು ಮಳೆಯ ಸಾಧ್ಯತೆ ಇದೆ. ಉತ್ತರ ಕನ್ನಡ ಮತ್ತು ಉತ್ತರ ಒಳನಾಡು ಜಿಲ್ಲೆಗಳಲ್ಲಿ ಬಿಸಿಲು ಮತ್ತು ಮೋಡ ಮಿಶ್ರಿತ ವಾತಾವರಣವಿರುತ್ತದೆ.

ದಕ್ಷಿಣ ಕನ್ನಡ ಮತ್ತು ಉಡುಪಿಯ ಒಂದೆರಡು ಕಡೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಹಗುರ ಮಳೆಯಾಗುವ ಮುನ್ಸೂಚನೆಯಿದೆ. ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಗಂಟೆಗೆ 30-40 ಕಿ.ಮೀ. ವೇಗದ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಸಂಜೆ ಅಥವಾ ರಾತ್ರಿಯ ವೇಳೆಗೆ ಮೋಡಗಳು ದಟ್ಟವಾಗುವ ಸಾಧ್ಯತೆಯಿದ್ದು, ನಗರದ ಕೆಲವು ಕಡೆಗಳಲ್ಲಿ ಗುಡುಗು ಸಹಿತ ಹಗುರ ಮಳೆಯಾಗುವ ನಿರೀಕ್ಷೆಯಿದೆ. ಈ ಮಳೆಯ ಸಮಯದಲ್ಲಿ ಗಂಟೆಗೆ ಸುಮಾರು 30 ರಿಂದ 40 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ ಕರ್ನಾಟಕದ ಹವಾಮಾನದಲ್ಲಿ ಏರುಪೇರು ಕಂಡುಬಂದಿದ್ದು, ದಕ್ಷಿಣ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ.

ಪ್ರಾಜೆಕ್ಟ್ ಫ್ರೀಡಂ ತಾತ್ಕಾಲಿಕ ಸ್ಥಗಿತಗೊಳಿಸಿದ ಟ್ರಂಪ್

• ಪ್ರಜೋದಯ ವರದಿ

ವಾಷಿಂಗ್ಟನ್: ಇರಾನ್‌ನ ಹಿಡಿತದಲ್ಲಿರುವ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ಹಡಗುಗಳ ಸುಗಮ ಸಂಚಾರಕ್ಕೆ ಸೂಕ್ತ ಮಾರ್ಗ ದರ್ಶನ ನೀಡಲು ಉದ್ದೇಶಿಸಿದ್ದ ಪ್ರಾಜೆಕ್ಟ್ ಫ್ರೀಡಂ ಉಪಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತ ಗೊಳಿಸಲಾಗುವುದೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದಾರೆ.

ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆ ಯಲ್ಲಿ ನಾವು ಪ್ರಚಂಡ ಯಶಸ್ಸು ಸಾಧಿಸಿದ್ದೇವೆ. ಅಮೇರಿಕಾ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದ ಏರ್ಪಡಿಸಲು ಸಂಧಾನಕಾರನಾಗಿ ಕಾರ್ಯನಿರ್ವಹಿಸುತ್ತಿರುವ ಪಾಕಿಸ್ತಾನ ಮತ್ತು ಇತರ ದೇಶಗಳ ವಿನಂತಿಯ ಮೇರೆಗೆ ಇರಾನ್ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸುವ ಮೂಲಕ ಪರಸ್ಪರ ಒಪ್ಪಂದಕ್ಕೆ ಬಂದಿದ್ದೇವೆಂದು ಟ್ರಂಪ್ ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ಟ್ರೂಥ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇರಾನ್ ಬಂದರುಗಳ ಮೇಲಿನ ನೌಕಾ ದಿಗ್ಬಂಧನ ಪೂರ್ಣ ಪ್ರಮಾಣದಲ್ಲಿ ಜಾರಿಯ ಲ್ಲಿರುತ್ತದೆ. ಆದರೆ, ಉಭಯ ದೇಶಗಳ ನಡು ವಿನ ಶಾಂತಿ ಒಪ್ಪಂದವನ್ನು ಅಂತಿಮಗೊಳಿ ಸಲು ಮತ್ತು ಸಹಿ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸುವ ಸಲುವಾಗಿ ಪ್ರಾಜೆಕ್ಟ್ ಫ್ರೀಡಂಅನ್ನು ತಾತ್ಕಾಲಿಕವಾಗಿ ಸ್ಥಗಿತ ಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆಂದು ಟ್ರಂಪ್ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನ ತೆಯ ನಡುವೆ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ಹಡಗುಗಳಿಗೆ ನೆರವಾಗಲು ಟ್ರಂಪ್ ಭಾನುವಾರವಷ್ಟೇ ಪ್ರಾಜೆಕ್ಟ್ ಫ್ರೀಡಂ ಅನ್ನು ಘೋಷಿಸಿದ್ದರು. ಪ್ರಾಜೆಕ್ಟ್ ಫ್ರೀಡಂಗಾಗಿ ಅಮೇರಿಕಾವು ಕ್ಷಿಪಣಿ ವಿಧ್ವಂಸಕ ನೌಕೆಗಳು, 100ಕ್ಕೂ ಹೆಚ್ಚು ವಿಮಾನಗಳು, ಮಾನವ ರಹಿತ ಡ್ರೋನ್ ಪ್ಲಾಟ್‌ಫಾರ್ಮ್‌ಗಳು ಮತ್ತು 15,000 ಸೈನಿಕರನ್ನು ನಿಯೋಜಿಸಲಿದೆ ಎಂದು ಟ್ರಂಪ್ ಹೇಳಿದ್ದರು.

ಟ್ರಂಪ್ ನಿರ್ಧಾರ ಸ್ವಾಗತಿಸಿದ ಪಾಕ್

ಹೊರ್ಮುಜ್ ಜಲಸಂಧಿಯಲ್ಲಿ ಅಮೇರಿಕಾ ಆರಂಭಿಸಿದ್ದ ಪ್ರಾಜೆಕ್ಟ್ ಫ್ರೀಡಂ ಅನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಿದ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರವನ್ನು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಸ್ವಾಗತಿಸಿದ್ದು, ಟ್ರಂಪ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಧೈರ್ಯಶಾಲಿ ನಾಯಕತ್ವ ಮತ್ತು ಸರಿಯಾದ ಸಮಯಕ್ಕೆ ಹೊರ್ಮುಜ್ ಜಲಸಂಧಿಯಲ್ಲಿ ಪ್ರಾಜೆಕ್ಟ್ ಫ್ರೀಡಂ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದಕ್ಕೆ ಅವರಿಗೆ ಧನ್ಯವಾದ ತಿಳಿಸುತ್ತೇನೆಂದು ಶೆಹಬಾಜ್ ಷರೀಫ್, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕಿಸ್ತಾನ, ಸೌದಿ ಅರೇಬಿಯಾ ಸೇರಿ ಶಾಂತಿ ಬಯಸುವ ದೇಶಗಳು ಮಾಡಿದ ಮನವಿಗೆ ಟ್ರಂಪ್ ಅವರು ಸ್ಪಂದಿಸಿದ್ದಾರೆ. ಇದು ಸಂಘರ್ಷದ ಸಂದರ್ಭದಲ್ಲಿ ಪ್ರಾದೇಶಿಕ ಶಾಂತಿಗೆ ಸಹಾಯವಾಗಲಿದೆ ಎಂದು ಹೇಳಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷವನ್ನು ಅಂತ್ಯಗೊಳಿಸುವ ಮತ್ತು ಮಾತುಕತೆಯ ಮೂಲಕ ಶಾಂತಿ ಸ್ಥಾಪಿಸುವ ಎಲ್ಲಾ ಕೆಲಸಗಳನ್ನು ಪಾಕಿಸ್ತಾನ ಮಾಡುತ್ತಿದೆ. ನಮ್ಮ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಮಾತುಕತೆಯು ಯಶಸ್ವಿಯಾಗುವ ಸಾಧ್ಯತೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸೋಮವಾರ ಅಮೇರಿಕಾವು ಇರಾನ್‌ನ ಹಿಡಿತದಲ್ಲಿರುವ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ಹಡಗುಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಪ್ರಾಜೆಕ್ಟ್ ಫ್ರೀಡಂಕಾರ್ಯಾಚರಣೆ ಆರಂಭಿಸಿತ್ತು.

ಪರಿಶ್ರಮದಿಂದ ಕಲಿತ ವಿದ್ಯೆ ಕೊನೆಯ ತನಕ ಜೊತೆಗಿರುತ್ತೆ

» ಮೊದಲನೇ ಪುಟದಿಂದ

ಆಂಗ್ಲ ಮಾಧ್ಯಮಕ್ಕೆ ಒತ್ತು

ಅರಸೀಕೆರೆ ಶಾಸಕ ಕೆ.ಎಂ.ಶಿವ ಲಿಂಗೇಗೌಡ ಅವರು ಮಾತನಾಡಿ, ಆಧುನಿಕತೆ ಬೆಳೆದಂತೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅಂಗ್ಲೆ ಯಲ್ಲಿ ಪ್ರಪಂಚದ ಪ್ರತಿ ವಿದ್ಯ ಮಾನ ವನ್ನು ಅರಿಯುವ ಸ್ಥಿತಿಯಲ್ಲಿ ನಾವಿ ದ್ದೇವೆ.ಆದ್ದರಿಂದ ವಿದ್ಯಾರ್ಥಿಗಳು ಹೊಸ ತನವನ್ನು ಅಳವಡಿಸಿಕೊಂಡು ಮುನ್ನಡೆ ಯಬೇಕು. ಪ್ರಪಂಚವನ್ನು ಅರಿತರೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತ ದೆಂದರು.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೋಲಿಸಿ ದರೆ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ಕೊರತೆ ಇರುತ್ತದೆ. ಆ ಕೊರತೆ ಯನ್ನು ಹೋಗಲಾಡಿಸಬೇಕೆಂಬ ಉದ್ದೇ ಶದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾರಂಭಿಸಲಾಗುತ್ತಿದೆ. ಎಲ್‌ಕೆಜಿಯಿಂದ ದ್ವಿತೀಯ ಪಿಯುವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಯನ್ನು ನಮ್ಮ ಸರ್ಕಾರ ಜಾರಿಗೊಳಿಸಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಅವರು ಮಾತನಾಡಿ, ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮೂಲಕ ಪೋಷಕರು ಹಾಗು ವಿದ್ಯಾ ಸಂಸ್ಥೆಯ ಕೀರ್ತಿ ಹೆಚ್ಚಿಸಿದ್ದಾರೆ. ಹಾಸನ ಜಿಲ್ಲೆ ವಿಜ್ಞಾನ, ರಾಜಕೀಯ, ಸಾಹಿತ್ಯ, ಕ್ರೀಡಾ ಕ್ಷೇತ್ರದಲ್ಲಿ ಅಪರಿಮಿತ ಸಾಧನೆ ಮಾಡಿದೆ. ಹೆಚ್ಚು ಅಂಕ ಪಡೆದು ಪುರಸ್ಕಾರಕ್ಕೆ ಭಾಜನರಾಗಿರುವ ಮಕ್ಕಳ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಬೇಲೂರು ಶಾಸಕ ಹೆಚ್.ಕೆ. ಸುರೇಶ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸ್ವಾಗತಿಸಿದರು. ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಉಪ ಅರಣ್ಯ ಸಂರಕ್ಷಣಾಧಿ ಕಾರಿ ಸೌರಭ ಕುಮಾರ್, ಉಪ ವಿಭಾ ಗಾಧಿಕಾರಿ ಜಗದೀಶ್ ಗಂಗಣ್ಣವರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್.ಬಲರಾಮ್, ಶಿಕ್ಷ ಣಾಧಿಕಾರಿ ಚಂದ್ರಶೇಖರ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ.ಗಂಗಾಧರ್ ಇದ್ದರು.ಜಿಲ್ಲೆಯ 400 ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಯಿತು.

ಶಾಲೆಗಳಿರುವುದು ಮಕ್ಕಳಿಗೆ, ಶಿಕ್ಷಕರು-ಬಿಸಿಯೂಟ ಸಿಬ್ಬಂದಿಗಲ್ಲ

» ಮೊದಲನೇ ಪುಟದಿಂದ

ನೀಡಲೋ. ಈ ಬಗ್ಗೆ ನಾವೇನಾದರೂ ಮಾತನಾಡಿದರೆ ಕನ್ನಡ ವಿರೋಧಿ, ಸರ್ಕಾರಿ ಶಾಲೆಗಳ ವಿರೋಧಿ ಎಂದು ಬಿಂಬಿಸುತ್ತಾರೆ. ಈ ರೀತಿಯ ಮನಸ್ಥಿತಿಗೆ ಏನು ಹೇಳಬೇಕು. ಈ ರೀತಿಯಾದರೆ ಮಕ್ಕಳ ಸ್ಥಿತಿ ಏನಾಗ ಬೇಕೆಂದು ಪ್ರಶ್ನಿಸಿದರು.

ಶಿಕ್ಷಕರ ಕೊರತೆ ಶುದ್ಧ ಸುಳ್ಳು

ಶಿಕ್ಷಕರ ಕೊರತೆ ಎಂಬುದು ಅಧಿಕಾರಿಗಳು ಹೇಳುವ ಶುದ್ಧ ಸುಳ್ಳು. ಸಾಮಾನ್ಯವಾಗಿ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇರಬೇಕು. ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಒಟ್ಟು 72,588 ವಿದ್ಯಾರ್ಥಿಗಳಿದ್ದಾರೆ. ಅದೇ ರೀತಿ ಖಾಯಂ ಶಿಕ್ಷಕರು ಹಾಗು ಅತಿಥಿ ಶಿಕ್ಷಕರು ಸೇರಿ ಒಟ್ಟು 6,527 ಜನರಿದ್ದಾರೆ. ಅಂದರೆ 11 ವಿದ್ಯಾರ್ಥಿ ಗಳಿಗೆ ಒಬ್ಬ ಶಿಕ್ಷಕ ಇದ್ದಂತೆ ಆಯಿತು. ಇಷ್ಟು ಪ್ರಮಾಣದ ಶಿಕ್ಷಕರು ಯಾವ ದೇಶದಲ್ಲಿ ಇದ್ದಾ ರೆಂಬುದನ್ನು ನನಗೆ ತೋರಿಸಿ, ಅಧಿಕಾರಿಗಳಿಂದ ಸತ್ಯ ಮರೆ ಮಾಚುವ ಕೆಲಸವಾಗುತ್ತಿದೆ. ಮಕ್ಕಳಿರುವ ಕಡೆಗಳಲ್ಲಿ ಶಿಕ್ಷಕರಿಲ್ಲ, ಶಿಕ್ಷಕರಿರುವ ಕಡೆಗಳಲ್ಲಿ ಮಕ್ಕಳಿಲ್ಲ. ಇದೇ ಸಮಸ್ಯೆಗೆ ಮೂಲ ಕಾರಣ. ಇದನ್ನು ಸರಿಪಡಿಸಿಕೊಳ್ಳುವಂತೆ ಡಿಡಿಪಿಐ ಅವರಿಗೆ ಸೂಚಿಸಿದರು.

ಅಂಕಿ-ಅಂಶ ಬೇಡ ವಾಸ್ತವಾಂಶ ಹೇಳಿ

ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಸಭೆಗೆ ಪುಸ್ತಕದ ಅಂಕಿ-ಅಂಶಗಳನ್ನು ಹೇಳುವುದನ್ನು ಬಿಟ್ಟು, ಸರ್ಕಾರಿ ಶಾಲೆಗೆ ಮಕ್ಕಳು ಏಕೆ ಬರು ತ್ತಿಲ್ಲ ಎಂಬುವುದನ್ನು ತಿಳಿಸಿ. ಸರ್ಕಾರಿ ಶಾಲೆಯ ಶಿಕ್ಷಕರಿಗೆ ಸರಿಯಾಗಿ ಇಂಗ್ಲೀಷ್ ಮಾತನಾ ಡಲು ಬರುವುದಿಲ್ಲ, ಅವರೇನು ಮಕ್ಕಳಿಗೆ ಕಲಿಸುತ್ತಾ ರೆಂದು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿ ದ್ದಾರೆ. ಶಿಕ್ಷಕರಿಗೆ ಏನೇ ತರಬೇತಿ ಕೊಟ್ಟರೂ ಪ್ರಯೋಜವಾಗಿಲ್ಲ. ಚೆನ್ನಾಗಿ ಇಂಗ್ಲೀಷ್ ಬರುವ ಶಿಕ್ಷಕರನ್ನು ನೇಮಕ ಮಾಡಿ ಎಂದು ಸಚಿವರನ್ನು ಒತ್ತಾಯಿಸಿದರು. ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮತ್ತಿತರರು ಹಾಜರಿದ್ದರು.

ಸಾಧು-ಸಂತರ ಶಾಪ ಜೀವನ ಪೂರ್ತಿ ಕಾಡುವುದು : ಕೋಡಿ ಶ್ರೀ

» ಮೊದಲನೇ ಪುಟದಿಂದ

ಪೀಠಾಧ್ಯಕ್ಷರಾದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರು ಬಸವಣ್ಣನ ಆಶಯ ದಂತೆ ಜಾತಿ, ಮತ, ಪಂಥ, ಬೇಧ ಎಣಿಸದೆ ಎಲ್ಲರಿಗೂ ಸಹಬಾಳ್ವೆಯ ಸಂದೇಶ ಸಾರುತ್ತಿರುವುದು ಇತರ ಮಠಗಳಿಗೆ ಆದರ್ಶವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವರ್ಣಗೌರಮ್ಮ ದೇವಿಯ ಇಚ್ಛೆಯಂತೆ ನೂತನ ವಾಗಿ ನಿರ್ಮಾಣವಾಗುತ್ತಿರುವ ದೇವಾಲ ಯವು ದೇಶದ 18 ಶಕ್ತಿ ಪೀಠಗಳ ಜೊತೆಗೆ 19ನೇ ಶಕ್ತಿಪೀಠ ವಾಗಿ ಬೆಳೆಯಲಿದೆ. ನೊಂದು ಬರುವ ಭಕ್ತರಿಗೆ ಜಗನ್ಮಾತೆ ಸ್ವರ್ಣಗೌರಮ್ಮ ದೇವಿ ಉದ್ಧರಿಸಲಿ ದ್ದಾಳೆಂದು ಹೇಳಿದರು. ಸಮಾರಂಭದಲ್ಲಿ ಬೊಮ್ಮನ ಹಳ್ಳಿ ಮಠದ ಶಿವಮೂರ್ತಿ ಸ್ವಾಮೀಜಿ, ಮಾಡಾಳು ನಿರಂಜನ ಮಠದ ರುದ್ರಮುನಿ ಸ್ವಾಮೀಜಿ, ಮೂರು ಕಳಶ ಮಠದ ಜ್ಞಾನಪ್ರಭು ಸಿದ್ದರಾಮ ದೇಶಿಕೇಂದ್ರ ಸ್ವಾಮೀಜಿ, ಕೋಡಿಮಠದ ಉತ್ತರಾಧಿ ಕಾರಿ ಚೇತನ್ ಮರಿದೇವರು, ಹೆಚ್‌ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ, ಬಿಜೆಪಿ ಮುಖಂಡ ಜಿವಿಟಿ ಬಸವರಾಜ್, ಕೆವಿಎನ್ ಶಿವು, ಜೆಡಿಎಸ್ ಮುಖಂಡ ಚಂದ್ರಶೇಖರ್, ಶೇಖರಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯೆ ಲಕ್ಷ್ಮಿ ಶ್ರೀಧರ್, ಮಾಡಾಳು ಮೂಲ ಸ್ವರ್ಣಗೌರಿ ದೇವಾಲ ಯದ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಟರಾಜ್ ಮತ್ತಿತರರು ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಮೂಲ ಸ್ವರ್ಣಗೌರಮ್ಮ ದೇವಾ ಲಯ ಆವರಣದಲ್ಲಿ ಉತ್ಸವ ನಡೆಯಿತು. ಅದರೊಂದಿಗೆ ಕಳೆದ 6 ದಿನಗಳಿಂದ ನಡೆಯುತ್ತಿದ್ದಶಿವಲಿಂಗಜ್ಜಯ್ಯ ಅವರಪುಣ್ಯಪ್ರವಚನ ಮುಕ್ತಾಯವಾಯಿತು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಹೊಳೆನರಸೀಪುರ: ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪ ಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಿರ್ಲಕ್ಷ್ಯದ ಚಾಲನೆಯಿಂದ ಎಕ್ಸ್‌ಎಲ್ ಸೂಪರ್ ಬೈಕ್ ಮರಕ್ಕೆ ಡಿಕ್ಕಿಯಾಗಿ ಸವಾರ ಮೃತಪಟ್ಟಿರುವ ಘಟನೆ ಗನ್ನಿಕಡ ಸಮೀಪ ನಡೆದಿದೆ. ಗುಂಜೇವು ಗ್ರಾಮದ ರಂಗಸ್ವಾಮಿ ಮೃತರು. ಕಾರ್ಯನಿಮಿತ್ತ ಗಂಡಸಿಗೆ ಹೊರಟಿದ್ದ ಅವರು ಬೈಕ್ ಅನ್ನು ಅತಿ ವೇಗ ಹಾಗು ನಿರ್ಲಕ್ಷ್ಯದಿಂದ ಓಡಿಸಿ ರಸ್ತೆ ಪಕ್ಕದ ಮರಕ್ಕೆ ಡಿಕ್ಕಿ ಮಾಡಿದ್ದಾರೆ. ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆ ಯಲ್ಲಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿ ಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಎದು ರುಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿ ರುವ ಘಟನೆ ತಾಲ್ಲೂಕಿನ ನಾಗಲಾಪುರ -ಸಂಕನಹಳ್ಳಿ ರಸ್ತೆಯಲ್ಲಿ ನಡೆದಿದೆ. ಪಟ್ಟಣದ ವಿದ್ಯುತ್ ನಗರ ನಿವಾಸಿ ಸುನೀಲ್ ಮೃತರು. ಸಂಕನಹಳ್ಳಿ ಕಡೆ ಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಯಾಗಿ ಗಂಭೀರ ಗಾಯಗೊಂಡಿದ್ದ ಸುನೀಲ್‌ನನ್ನು ಹಿಮ್ಸ್‌ಗೆ ದಾಖಲಿಸಲಾ ಗಿತ್ತು. ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಸರಾ ವೀರ ಅರ್ಜುನ ಸ್ಮಾರಕ ಲೋಕಾರ್ಪಣೆ

» ಮೊದಲನೇ ಪುಟದಿಂದ

ಗೌರವಿಸುವುದು ಉದ್ದೇಶವಾಗಿದೆ ಎಂದರು.

ಸ್ಮಾರಕದ ಸುತ್ತ ಸುರಕ್ಷತೆ ದೃಷ್ಟಿ ಯಿಂದ ಸುತ್ತು ಗೋಡೆ, ಟೆಂಟಕಲ್ ಫೆನ್ಸಿಂಗ್ ಮತ್ತು ಅಗತ್ಯವಿದ್ದರೆ ಬ್ಯಾರಿ ಕೇಡ್ ವ್ಯವಸ್ಥೆ ಮಾಡಲಾಗುವುದು. ಪ್ರವಾಸಿ ಗರಿಗೆ ಅಪಾಯವಾಗದಂತೆ ಕ್ರಮ ಕೈಗೊಳ್ಳಲಾಗು ತ್ತದೆ. ಸಾರ್ವಜನಿಕರು ಮತ್ತು ರೈತರು ಅರಣ್ಯ ಇಲಾಖೆ ಯೊಂದಿಗೆ ಸಹಕರಿಸ ಬೇಕೆಂದು ವಿನಂತಿಸಿದರು.

ಸಾಫ್ಟ್ ರಿಲೀಸ್ ಸೆಂಟರ್ ಸ್ಥಾಪನೆ ಗಾಗಿ ಕೇಂದ್ರ ದಿಂದ ಅನುಮತಿ ದೊರ ಕದ ಹಿನ್ನಲೆಯಲ್ಲಿ, ರಾಜ್ಯ ವ್ಯಾಪ್ತಿ ಯಲ್ಲಿ ಹೊಸ ಯೋಜನೆ ರೂಪಿಸ ಲಾಗುತ್ತಿದೆ. ವಿಸ್ತೃತ ವರದಿ ಸಿದ್ಧವಾಗುತ್ತಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭಿಸಲಾ ಗುತದೆಂದು ಹೇಳಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಅರಣ್ಯ ಸಚಿವರ ಕಾಳಜಿಯಿಂದ ಇಲ್ಲಿ ಅರ್ಜುನನ ಸ್ಮಾರಕ ನಿರ್ಮಾಣವಾಗಿದೆ. ಅವರು ನುಡಿದಂತೆ ನಡೆದುಕೊಂಡಿದ್ದಾರೆ. ಮಲೆನಾಡು ಭಾಗದಲ್ಲಿ ಹೆಚ್ಚಿ ರುವ ಮಾನವ-ಕಾಡಾನೆ ಸಂಘರ್ಷ ನಿಯಂತ್ರಿ ಸುವಲ್ಲಿ ನಮ್ಮ ಸರ್ಕಾರ ಸಾಕಷ್ಟು ಮಟ್ಟಿಗೆ ಯಶಸ್ವಿ ಯಾಗಿದೆ ಎಂದರು.

ಹಗಲಿರುಳು ಶ್ರಮಿಸುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯ ಶ್ಲಾಘನೀಯವಾಗಿದ್ದು, ಮಾನವ ಮತ್ತು ಕಾಡಾನೆ ಸಂಘರ್ಷ ನಿಯಂತ್ರಣಕ್ಕೆ ಅವರು ತೋರಿಸುತ್ತಿರುವ ಪರಿಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿ ಸಿದರು. ಅರಣ್ಯ ಸಚಿವರು ಬೀದರ್ ಜಿಲ್ಲೆಯನ್ನು ಹೊರತುಪಡಿಸಿದರೆ ಅತಿ ಹೆಚ್ಚು ಬಾರಿ ನಮ್ಮ ಕ್ಷೇತ್ರಕ್ಕೆ ಭೇಟಿ ನೀಡಿ, ಸ್ಥಳೀಯ ಸಮಸ್ಯೆಗಳನ್ನು ತಿಳಿದು ಕೊಂಡು ಅವುಗಳನ್ನು ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದಾರೆಂದರು.

ಮೂಲಸೌಕರ್ಯಕ್ಕೆ ಆಗ್ರಹ

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಸ್ಮಾರಕ ನಿರ್ಮಾಣವಾಗಿದೆಯಾದರೂ ಜಾಗವನ್ನು ಪ್ರವಾಸಿ ತಾಣವಾಗಿಸಬೇಕೆಂಬುದು ನಮ್ಮ ಬೇಡಿಕೆ ಯಾಗಿತ್ತು. ಕೆಲ ತಿಂಗಳ ಹಿಂದೆಯೇ ಉದ್ಘಾಟನೆಗೆ ನಿರ್ಧರಿಸಿದ್ದರು. ನಾನು ಅದಕ್ಕೆ ವಿರೋಧಿಸಿದ್ದರಿಂದ ಸ್ವಲ್ಪ ಸೌಲಭ್ಯ ಕಲ್ಪಿಸಿದ್ದಾರೆಂದರು.

ಪ್ರವಾಸಿಗರ ಅನುಕೂಲಕ್ಕಾಗಿ ಸಮರ್ಪಕ ರಸ್ತೆ, ಕುಡಿಯುವ ನೀರು, ಶೌಚಾಲಯ, ವಿಶ್ರಾಂತಿ ಕೊಠಡಿ ಹಾಗು ಭದ್ರತಾ ಸಿಬ್ಬಂದಿಗೆ ವಸತಿ ವ್ಯವಸ್ಥೆ ಅಗತ್ಯವಿದೆ. ಮಳೆಗಾಲದಲ್ಲಿ ವಾಹನ ಸಂಚಾರ ಕಷ್ಟವಾಗಿದ್ದು ರಸ್ತೆ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದರು.

ವೀರ ಅರ್ಜುನನಿಗೆ ಇನ್ನೂ ಹೆಚ್ಚಿನ ಗೌರವ ದೊರಕ ಬೇಕಾಗಿತ್ತು. ಭವಿಷ್ಯದಲ್ಲಿ ಕಂಚಿನ ಪ್ರತಿಮೆ ಸ್ಥಾಪನೆ ಮಾಡುವ ಯೋಜನೆ ಕೈಗೊಳ್ಳಬೇಕು. ಪ್ರವಾಸಿಗರ ಸುರಕ್ಷತೆಗಾಗಿ ಬೆಳಿಗ್ಗೆಯಿಂದ ಸಂಜೆವರೆಗೆ ಭದ್ರತಾ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಯಾ ಗಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಮುರಳಿ ಮೋಹನ್, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಮತ್ತಿತರರಿದ್ದರು.

ಮನೆಯ ಸಜ್ಜೆ ಕುಸಿದು ವ್ಯಕ್ತಿಗೆ ಗಂಭೀರ ಗಾಯ

ಬಾಣಾವರ: ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ವ್ಯಕ್ತಿಯ ಮೇಲೆ ಮನೆಯ ಸಜ್ಜೆ ಕುಸಿದು ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡು ಅಸ್ವಸ್ಥ ನಾಗಿರುವ ಘಟನೆ ಪಟ್ಟಣದ ಪೇಟೆ ಬಡಾವಣೆಯಲ್ಲಿ ನಡೆದಿದೆ.

ಬಾಣಾವರ ಪಟ್ಟಣದ ಪೊಲೀಸ್ ಠಾಣೆ ಮುಂಭಾಗದ ಮನೆಯಲ್ಲಿ ಇಕ್ಬಾಲ್ ಅಹಮದ್ ಎಂಬುವವರ ಮೇಲೆ ಮನೆಯ ಸಜ್ಜೆ ಕುಸಿದು ಬಿದ್ದಿದ್ದು, ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತಕ್ಷಣ ಪಟ್ಟಣ ಪಂಚಾಯಿತಿ ಸದಸ್ಯ ಸೈಯದ್ ಆಸೀಫ್ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳ ಸಹ ಕಾರದಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೊದಲು ಬಾಣಾವರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ನಂತರ ಅರಸೀಕೆರೆ ತಾಲ್ಲೂಕು ಆಸ್ಪತ್ರೆಗೆ ರವಾನಿಸಲಾಗಿದೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾ ಗಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ. ಶಾಸಕ ಕೆ. ಎಂ.ಶಿವಲಿಂಗೇಗೌಡ, ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಆರೋಗ್ಯ ವಿಚಾರಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಸರ್ಕಾರ: ಬಿಜೆಪಿ ಬೈಕ್ ರ‍್ಯಾಲಿ

• ಪ್ರಜೋದಯ ವರದಿ

ಹಾಸನ: ಅಕ್ರಮ ವಲಸೆ, ಸ್ಥಳೀಯರಿಗೆ ಹಿಂಸೆ, ನಿರುದ್ಯೋಗ ಹಾಗು ಮಮತಾ ಬ್ಯಾನರ್ಜಿ ಅವರ ಸರ್ವಾಧಿಕಾರಿ ಧೋರಣೆಗೆ ಬೇಸತ್ತು ಪಶ್ಚಿಮ ಬಂಗಾಳದ ಜನರು ಬಿಜೆಪಿಗೆ ಅಭೂತ ಪೂರ್ವ ಬೆಂಬಲ ನೀಡಿದ್ದಾರೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಹೇಳಿದರು.

ಪುದುಚೇರಿ, ಅಸ್ಸಾಂ ಹಾಗು ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಬುಧವಾರ ನಗರದಲ್ಲಿ ಹಮ್ಮಿ ಕೊಂಡಿದ್ದ ಬೈಕ್ ರ‍್ಯಾಲಿಯಲ್ಲಿ ಅವರು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಹಾಗು ಗೃಹ ಸಚಿವ ಅಮಿತ್ ಶಾ ಅವರ ಪ್ರಯತ್ನದ ಫಲವಾಗಿ ಪಶ್ಚಿಮ ಬಂಗಾಳ ಸಹ ಬಿಜೆಪಿ ವಶವಾ ಗಿದೆ. ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರ ದುರಾಡಳಿತ ಅಂತ್ಯಗೊಂಡಿದೆ. ಅಲ್ಲಿನ ಜನರು ಇನ್ನು ಮುಂದೆ ಒಳ್ಳೆಯ ಬದುಕು ಕಟ್ಟಿಕೊಳ್ಳುವ ವಾತಾವರಣ ಸೃಷ್ಟಿಯಾಗಿದೆ ಎಂದರು.

ಪುದುಚೇರಿ ಹಾಗು ಅಸ್ಸಾಂನಲ್ಲಿ ಬಿಜೆಪಿ ಗೆಲುವಿನ ನಾಗಾಲೋಟ ಮುಂದುವರಿದಿದೆ. ಪಂಚ ರಾಜ್ಯ ಚುನಾವಣೆ ದೇಶದ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದಾಗಿತ್ತು. ದಕ್ಷಿಣದ ರಾಜ್ಯಗಳಲ್ಲೂ ಬಿಜೆಪಿ ಶಕ್ತಿ ವೃದ್ಧಿಸಬೇಕೆಂಬ ನಮ್ಮ ನಾಯಕರ ಸಂಕಲ್ಪ ಆದಷ್ಟು ಶೀಘ್ರದಲ್ಲೇ ಈಡೇರುತ್ತ ದೆಂದರು.

2028ರ ವಿಧಾನಸಭೆ ಚುನಾವಣೆ ಯಲ್ಲಿ ಕರ್ನಾಟಕದಲ್ಲೂ ಬಿಜೆಪಿ ಗೆಲ್ಲ ಬೇಕು. ಆ ನಿಟ್ಟಿನಲ್ಲಿ ಕಾರ್ಯಕರ್ತರು ಶಕ್ತಿಮೀರಿ ಶ್ರಮಿಸುತ್ತಿದ್ದಾರೆಂದರು.

ಜಿಲ್ಲಾ ಬಿಜೆಪಿ ಕಚೇರಿಯಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ‍್ಯಾಲಿ ನಡೆಸಲಾಯಿತು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಗಿರೀಶ್ ನಂಬಿಹಳ್ಳಿ, ರಾಜ್ ಕುಮಾರ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ, ಯುವ ಮೋರ್ಚಾ ಅಧ್ಯಕ್ಷ ಅಮಿತ್ ಗೌಡ, ಮಾಧ್ಯಮ ಪ್ರಮುಖ್ ವೇದಾವತಿ, ನಗರ ಮಂಡಲ ಅಧ್ಯಕ್ಷ ಯೋಗೇಶ್, ಜಿಲ್ಲಾ ಉಪಾಧ್ಯಕ್ಷ ರಮೇಶ್ ಮತ್ತಿತರರಿದ್ದರು.

26 ಗ್ರಾಂ ತೂಕದ ಚಿನ್ನದ ಸರ ಕಳವು

ಚನ್ನರಾಯಪಟ್ಟಣ: ಮನೆಯಲ್ಲಿಟ್ಟಿದ್ದ 2.50 ಲಕ್ಷ ರೂ. ಮೌಲ್ಯದ 26 ಗ್ರಾಂ ತೂಕದ ಚಿನ್ನದ ಸರ ಕಳುವಾಗಿರುವ ಘಟನೆ ತಾಲ್ಲೂಕಿನ ಡಿ.ಕಾಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿಂಗಮ್ಮ ಎಂಬುವವರಿಗೆ ಸೇರಿದ ಸರ ಕಳುವಾಗಿದೆ. ಏ.23ರಂದು ಮದುವೆ ಕಾರ್ಯಕ್ರಮ ಮುಗಿಸಿಕೊಂಡು ಬಂದಿದ್ದ ನಿಂಗಮ್ಮ ಮನೆಯ ದಿವಾನ್ ಕಾಟ್‌ನ ಬಾಕ್ಸ್ ನಲ್ಲಿ ಸರ ಇಟ್ಟಿದ್ದರು. ಮಾರನೇ ದಿನ ನೋಡಿದಾಗ ನಾಪತ್ತೆಯಾಗಿದೆ ಎನ್ನಲಾಗಿದೆ. ಗ್ರಾಮಾಂತರ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

ಮದ್ಯಪಾನಿಗಳ ಅಡ್ಡೆಯಾದ ಜೂನಿಯರ್ ಕಾಲೇಜು ಮೈದಾನ ಕುಡುಕರಿಂದ ಅಸಭ್ಯ ವರ್ತನೆ : ಸ್ಥಳೀಯರಿಗೆ ಕಿರಿಕಿರಿ

• ಪ್ರಜೋದಯ ವರದಿ

ಬೇಲೂರು: ಪಟ್ಟಣದ ಜೂನಿಯರ್ ಕಾಲೇಜು ಮೈದಾನ ಮದ್ಯಪಾನಿಗಳ ಅಡ್ಡೆಯಾಗಿ ಮಾರ್ಪಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕಾಲೇಜು ಮೈದಾನದಲ್ಲಿ ಕತ್ತಲು ಆವರಿಸುತ್ತಿದ್ದಂತೆ ಕಾರುಗಳನ್ನು ನಿಲ್ಲಿಸಿ ಕೊಂಡು ಗುಂಪು ಗೂಡಿ ಮದ್ಯಪಾನ ಮಾಡುವವರ ಹಾವಳಿ ಹೆಚ್ಚುತ್ತಿದೆ. ಅದರಿಂದ ಸುತ್ತಮುತ್ತಲಿನ ನಿವಾಸಿ ಗಳು ಕಿರಿಕಿರಿ ಅನುಭವಿಸುವಂತಾಗಿದೆ. ಭಯದ ಪರಿಸ್ಥಿತಿಯಲ್ಲಿ ಜೀವನ ನಡೆಸುವಂತಾಗಿದೆ. ಶಾಲಾ ಮಕ್ಕಳ ಆಟ, ಸಾರ್ವಜನಿಕ ಕಾರ್ಯಕ್ರಮ ಗಳಿಗೆ ಮೀಸಲಾಗಿದ್ದ ಮೈದಾನ ಈಗ ಮದ್ಯ ಪಾನಿಗಳ ಸ್ಥಳವಾಗಿ ಬದ ಲಾಗಿದೆ. ರಾತ್ರಿ ವೇಳೆ ಅಸಭ್ಯ ವರ್ತನೆ, ಗದ್ದಲ ಹಾಗು ಗಾಜಿನ ಬಾಟಲ್‌ಗಳನ್ನು ಎಸೆಯುವಂತಹ ಘಟನೆಗಳು ಸಾಮಾನ್ಯವಾಗಿವೆ ಎಂದು ದೂರಿದರು.

ಮೈದಾನದ ಸುತ್ತಮುತ್ತಲಿನ ಮಹಿಳೆಯರು ಮತ್ತು ಹಿರಿಯರು ರಾತ್ರಿ ವೇಳೆ ಹೊರಗೆ ಬರಲು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಯುವಿಹಾರ ಮಾಡಲು ಬರುವವರಿಗೆ ಸಹ ಇದು ಸುರಕ್ಷಿತ ಸ್ಥಳವಾಗಿಲ್ಲ, ಶಾಲಾ ವಿದ್ಯಾರ್ಥಿಗಳು, ಹೆಣ್ಣುಮಕ್ಕಳು, ಇಂತಹ ವಾತಾವರ ಣದಲ್ಲಿ ಓಡಾಡಬೇಕಾಗಿರುವುದು ಪೋಷಕರಲ್ಲಿ ಆತಂಕಕ್ಕೆ ಕಾರಣವಾಗಿದೆ ಎಂದು ಹೇಳಿದರು.

> ಶಾಲಾ ಆಟದ ಮೈದಾನ ಸುತ್ತ ಕಾಂಪೌಂಡ್ ನಿರ್ಮಾಣಕ್ಕೆ ಸಿದ್ಧತೆ ಮಾಡಲಾಗಿದೆ. ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸಿ ಮೈದಾನವನ್ನು ಸುರಕ್ಷಿತಗೊಳಿಸಲಾಗುವುದು.
> - ಹೆಚ್.ಕೆ. ಸುರೇಶ್, ಶಾಸಕ

ಈ ಸಮಸ್ಯೆಗೆ ಶಾಶ್ವತ ಪರಿಹಾರ ವಾಗಿ ಮೈದಾನಕ್ಕೆ ತಡೆಗೋಡೆ ನಿರ್ಮಿಸಿ ನಿಯಂತ್ರಿತ ಪ್ರವೇಶ ವ್ಯವಸ್ಥೆ ಮಾಡಬೇಕೆಂದು ಜನರು ಒತ್ತಾಯಿಸಿದ್ದಾರೆ. ಪೊಲೀಸ್ ಇಲಾಖೆ ನಿಯಮಿತ ಪೆಟ್ರೋಲಿಂಗ್ ನಡೆಸಿ, ಅಕ್ರಮ ಮದ್ಯಪಾನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಸಾರ್ವಜನಿಕ ಸ್ಥಳದ ಭದ್ರತೆ ಕಾಪಾಡಬೇಕೆಂದು ಮನವಿ ಮಾಡಿದರು.

ಬರಗೂರು ಕೃಷಿ ಪತ್ತಿನ ಸಂಘಕ್ಕೆ ಲಕ್ಷ್ಮೀಶ ಅಧ್ಯಕ್ಷ



• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಬರಗೂರು ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಡಿ.ಕೆ.ಲಕ್ಷ್ಮೀಶ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಬಿ.ಪಿ.ಹರೀಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬುಧವಾರ ಸಹಕಾರಿ ಅಭಿವೃದ್ಧಿ ಅಧಿಕಾರಿ ವಿಜಯೇಂದ್ರ ಅವರ ನೇತೃತ್ವದಲ್ಲಿ ಚುನಾವಣೆ ಪ್ರಕ್ರಿಯೆ ನಡೆಯಿತು. ಡಿ.ಕೆ.ಲಕ್ಷ್ಮೀಶ್ ಒಬ್ಬರೇ ಅರ್ಜಿ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ಘೋಷಿಸಲಾಯಿತು.

ನೂತನ ಅಧ್ಯಕ್ಷ ಲಕ್ಷ್ಮೀಶ್ ಅವರು ಮಾತನಾಡಿ, ಸಹಕಾರಿ ಸಂಘದಲ್ಲಿ 1,700 ಜನ ಷೇರುದಾರರಿದ್ದು 1,100 ಜನರಿಗೆ 8 ಕೋಟಿ ರೂ. ಸಾಲ ನೀಡಲಾಗಿದೆ. 30 ಸ್ವಸಹಾಯ ಸಂಘ ಗುಂಪುಗಳಿಗೆ 94 ಲಕ್ಷ ರೂ. ಸಾಲ ಕಲ್ಪಿಸಲಾಗಿದೆ. ಸಕಾಲಕ್ಕೆ ಮರುಪಾವತಿಸುವ ಸದಸ್ಯರಿಗೆ ಹೆಚ್ಚುವರಿ ಸಾಲ ನೀಡುವ ಸಾಧ್ಯತೆ ಇದೆ. ಶಾಸಕ ಹೆಚ್.ಡಿ.ರೇವಣ್ಣ ಹಾಗು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರ ಮಾರ್ಗದರ್ಶನದಲ್ಲಿ ಸಂಘದ ಬೆಳವಣಿಗೆಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜಯರಾಮ್, ನಿರ್ದೇಶಕರಾದ ಬಿ.ಆರ್.ನಾರಾಯಣಸ್ವಾಮಿ, ಸಿ.ಎಸ್. ನಾಗೇಶ, ಬಿ.ಪಿ.ಹರೀಶ, ಬಿ.ಪಿ.ಹೇಮ ಕುಮಾರ್, ಬಿ.ಸಿ. ರಾಜು, ಮಂಜುನಾಥ, ಮಂಜಮ್ಮ, ಸುನಿತ, ಮಣಿಕಂಠ, ಸಹಕಾರಿ ಸಂಘದ ಮೇಲ್ವಿಚಾರಕ ಎಸ್.ಕೆ. ಅಭಿಲಾಷ್, ಎಸ್.ಆರ್.ಮಧು ಇತರರು ಹಾಜರಿದ್ದರು.

ಮೋದಿ ಮೈದಾನದಲ್ಲಿ ಫೈನಲ್ ಪಂದ್ಯ

• ಪ್ರಜೋದಯ ವರದಿ



ನವದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ 19ನೇ ಆವೃತ್ತಿಯ ಫೈನಲ್ ಪಂದ್ಯವು ಅಹಮದಾಬಾದ್‌ನ ನರೇಂದ್ರ ಮೋದಿ ಮೈದಾನದಲ್ಲಿ ನಡೆಯಲಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಮೇ 6ರಂದು ಘೋಷಿಸಿದೆ.

ಸಾಮಾನ್ಯವಾಗಿ ಹಾಲಿ ಚಾಂಪಿಯನ್‌ಗಳ (ರಾಯಲ್ ಚಾಲೆಂಜರ್ಸ್ ಬೆಂಗಳೂರು) ತವರು ಮೈದಾನದಲ್ಲಿ ಫೈನಲ್ ಪಂದ್ಯ ಆಯೋಜಿಸುವುದು ಸಂಪ್ರದಾಯವಾಗಿದೆ. ಹಾಗಾಗಿ ಆರ್‌ಸಿಬಿ ತಂಡದ ತವರು ಮೈದಾನವಾದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ಆಯೋಜನೆ ಆಗಲಿದೆ ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ, ಕಡಿಮೆ ಆಸನಗಳು, ಕಳೆದ ವರ್ಷ ನಡೆದಿದ್ದ ಕಾಲ್ತುಳಿತ ಮತ್ತು ಶಾಸಕರ ಟಿಕೆಟ್ ವಿವಾದ ಮುಂತಾದ ಕಾರಣಗಳಿಂದ ಈ ಬಾರಿಯ ಫೈನಲ್ ಪಂದ್ಯವು ಮತ್ತೆ ಮೋದಿ ಮೈದಾನದ ಪಾಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಫೈನಲ್ ಪಂದ್ಯವು ಮೇ 31ರಂದು ನಡೆಯಲಿದೆ.

ಅಹಮದಾಬಾದ್‌ನ ಮೊಟೆರಾ ಬಳಿಯಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ಕ್ರೀಡಾ ಸಂಕೀರ್ಣದಲ್ಲಿದ್ದ ಈ ಮೈದಾನದ ಮರು ನಿರ್ಮಾಣ ಕಾಮಗಾರಿಯನ್ನು 2015ರಲ್ಲಿ ಆರಂಭಿಸಲಾಯಿತು. 800 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾದ ಈ ಕ್ರೀಡಾಂಗಣವನ್ನು 2020ರಲ್ಲಿ ಉದ್ಘಾಟನೆ ಮಾಡಲಾಯಿತು. ಈ ಮೈದಾನವು ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡದ ತವರು ಮೈದಾನವಾಗಿದೆ.

ನರೇಂದ್ರ ಮೋದಿ ಮೈದಾನದಲ್ಲಿ 2022ರಲ್ಲಿ ಮೊದಲ ಬಾರಿ ಐಪಿಎಲ್ ಫೈನಲ್ ಪಂದ್ಯವನ್ನು ಆಯೋಜಿಸಲಾಗಿತ್ತು. ಅದರ ನಂತರ 2023, 2025 ಹಾಗೂ 2026ರಲ್ಲೂ ಇದೇ ಮೈದಾನದಲ್ಲಿ ಫೈನಲ್ ಪಂದ್ಯ ನಡೆಯುತ್ತಿದೆ. 2024ರಲ್ಲಿ ಮಾತ್ರ ಚೆನ್ನೈನಲ್ಲಿ ಫೈನಲ್ ಪಂದ್ಯ ನಡೆದಿತ್ತು.

2022ರ ಆವೃತ್ತಿಯಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಗುಜರಾತ್ ಟೈಟನ್ಸ್ ತಂಡವು 7 ವಿಕೆಟ್‌ಗಳ ಗೆಲುವು ಸಾಧಿಸುವ ಮೂಲಕ, ಚೊಚ್ಚಲ ಪ್ರಶಸ್ತಿ ಎತ್ತಿ ಹಿಡಿದಿತ್ತು. 2023ರ ಫೈನಲ್‌ನಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಸಿಎಸ್‌ಕೆ ತಂಡವು 5 ವಿಕೆಟ್‌ಗಳ ಜಯ ಸಾಧಿಸಿತ್ತು. 2025ರ ಫೈನಲ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ತಂಡವು 6 ರನ್‌ಗಳ ಗೆಲುವು ಸಾಧಿಸುವ ಮೂಲಕ 18 ವರ್ಷಗಳ ಬಳಿಕ ಮೊದಲ ಬಾರಿ ಚಾಂಪಿಯನ್ ಆಗಿತ್ತು.

ಇದರೊಂದಿಗೆ ಅತಿಹೆಚ್ಚು ಬಾರಿ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಿದ ಹಿರಿಮೆಗೆ ಈ ಮೈದಾನ ಪಾತ್ರವಾಗಿದೆ. ಚೆನ್ನೈನ ಚೆಪಾಕ್ ಮೈದಾನದಲ್ಲಿ 3 ಬಾರಿ (2011, 2012, 2024) ಫೈನಲ್ ನಡೆದಿದೆ. ಈಡನ್ ಗಾರ್ಡನ್ (2013, 2015), ಚಿನ್ನಸ್ವಾಮಿ ಮೈದಾನ (2014, 2016), ಮುಂಬೈನ ಡಿ.ವೈ.ಪಾಟೀಲ್(2008, 2010), ಹೈದರಾಬಾದ್‌ನ ರಾಜೀವ್ ಗಾಂಧಿ ಮೈದಾನಗಳು (2017, 2019) ತಲಾ 2 ಬಾರಿ ಫೈನಲ್ ಪಂದ್ಯವನ್ನು ಆಯೋಜಿಸಿವೆ. 2011ರ ವಿಶ್ವಕಪ್‌ಗೆ ಫೈನಲ್ ನಡೆದಿದ್ದ ವಾಂಖೆಡೆ ಮೈದಾನದಲ್ಲಿ 2018ರ ಐಪಿಎಲ್ ಆವೃತ್ತಿಯ ಫೈನಲ್ ಪಂದ್ಯ ನಡೆದಿದೆ.

ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಿರುವ ನರೇಂದ್ರ ಮೋದಿ ಕ್ರೀಡಾಂಗಣವು 1,32,000 ಕ್ಕೂ ಹೆಚ್ಚು ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಬಲ್ಲದು. ಇದು ಚಿನ್ನಸ್ವಾಮಿ ಮೈದಾನದ ತರಹದ ಕ್ರೀಡಾಂಗಣಗಳಿಗಿಂತ ಗಣನೀಯವಾಗಿ ಹೆಚ್ಚಾಗಿದೆ. ಅದರೊಂದಿಗೆ ಈ ಕ್ರೀಡಾಂಗ ಣವು ವಿಶ್ವದರ್ಜೆಯ ಒಳಚರಂಡಿ ವ್ಯವಸ್ಥೆ, ಹೈಟೆಕ್ ಎಲ್‌ಇಡಿ ಫ್ಲಡ್‌ಲೈಟ್‌ಗಳು ಮತ್ತು ಬೃಹತ್ ಜನಸಮೂಹವನ್ನು ನಿರ್ವಹಿಸಲು ಬೇಕಾದ ಸೌಲಭ್ಯಗಳನ್ನು ಒಳಗೊಂಡಿದೆ. ಅದರೊಂದಿಗೆ ಬಿಸಿಸಿಐ, ಹಲವು ಕಾರಣಗಳಿಂದ ಈ ಮೈದಾನದಲ್ಲಿ ದೊಡ್ಡ ಪಂದ್ಯಗಳನ್ನು ನಡೆಸಲು ಹೆಚ್ಚಿನ ಒಲವು ತೋರಿಸುತ್ತಿದೆ.

ಐಪಿಎಲ್ 2026 ಪ್ಲೇ ಆಫ್ ವೇಳಾಪಟ್ಟಿ

- ಮೇ 26–ಕ್ವಾಲಿಫೈಯರ್ 1 ಧರ್ಮಶಾಲಾ
- ಮೇ 27–ಎಲಿಮಿನೇಟರ್ ನ್ಯೂ ಚಂಡೀಗಢ
- ಮೇ 29–ಕ್ವಾಲಿಫೈಯರ್ 2 ನ್ಯೂ ಚಂಡೀಗಢ
- ಮೇ 31–ಫೈನಲ್ ಅಹಮದಾಬಾದ್ (ನರೇಂದ್ರ ಮೋದಿ ಕ್ರೀಡಾಂಗಣ)

ಪುರಸಭೆ ಕಾರ್ಯಾಚರಣೆ: 30 ಕೆ.ಜಿ. ಪ್ಲಾಸ್ಟಿಕ್ ವಶ

• ಪ್ರಜೋದಯ ವರದಿ

ಬೇಲೂರು: ಪಟ್ಟಣವನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ನಿಟ್ಟಿನಲ್ಲಿ ಪುರಸಭೆ ವತಿಯಿಂದ ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು ದಂಡ ವಿಧಿಸಲಾಗಿದೆ.

ಪಟ್ಟಣದಲ್ಲಿ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಹಾಗು ಮುಖ್ಯಾಧಿಕಾರಿ ಬಸವರಾಜು ಶಿಗ್ಗಾಂವಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹೂವಿನ ಅಂಗಡಿಗಳು, ಹೋಟೆಲ್‌ಗಳು ಸೇರಿ ವಿವಿಧ ವ್ಯಾಪಾರ ಮಳಿಗೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಯಿತು. ಈ ವೇಳೆ 30 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದ್ದು, ನಿಯಮ ಉಲ್ಲಂಘಿಸಿದ ವ್ಯಾಪಾರಿ ಗಳಿಗೆ ಒಟ್ಟು 5,000 ದಂಡ ವಿಧಿಸಲಾಗಿದೆ.

ನಂತರ ಮಾತನಾಡಿದ ಅಧ್ಯಕ್ಷೆ ಉಷಾ ಸತೀಶ್, ಸಾಕಷ್ಟು ಜಾಗೃತಿ ಮೂಡಿಸಿದ್ದರೂ ಪ್ಲಾಸ್ಟಿಕ್ ಬಳಕೆ ಮುಂದುವರಿದಿರುವುದರಿಂದ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆ ಇನ್ನೂ ಮುಂದೆ ಮುಂದುವರಿಯಲಿದೆ. ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಹಾಗು ಪ್ರಾಣಿಗಳಿಗೆ ಅಪಾಯ ಉಂಟಾಗುತ್ತಿರುವುದರಿಂದ ಸಾರ್ವಜನಿಕರು ಬಟ್ಟೆ ಚೀಲಗಳನ್ನು ಬಳಸುವಂತೆ ಅವರು ಮನವಿ ಮಾಡಿದರು. ಹೋಟೆಲ್‌ಗಳಲ್ಲಿ ಪಾರ್ಸೆಲ್ ನೀಡುವ ವೇಳೆ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಲು ಸೂಚನೆ ನೀಡಲಾಗಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾಂವಿ ಮಾತನಾಡಿ, ಈ ಹಿಂದೆಯೇ ಪ್ಲಾಸ್ಟಿಕ್ ನಿಷೇಧ ಕುರಿತು ತಿಳುವಳಿಕೆ ನೀಡಲಾಗಿತ್ತು. ಆದರೂ ಉಲ್ಲಂಘನೆ ಮುಂದುವರಿದಿರುವ ಹಿನ್ನಲೆ ದಾಳಿ ನಡೆಸಲಾಗಿದೆ. ಮುಂದಿನ ಬಾರಿ ಪತ್ತೆಯಾದರೆ ದಂಡವನ್ನು ದುಪ್ಪಟ್ಟು ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಕಾರ್ಯಾಚರಣೆಯಲ್ಲಿ ಪುರಸಭೆ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್, ಮೀನಾಕ್ಷಿ ವೆಂಕಟೇಶ್, ಜಮೀಲಾ ತೌಫಿಕ್, ಆರೋಗ್ಯಾಧಿಕಾರಿ ಲೋಹಿತ್ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019